ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್‌ನ ಆವರಣದಲ್ಲಿ ಸಂಸ್ಕಾರ ಭಾರತಿ ವತಿಯಿಂದ ನಡೆದ ಅಖಿಲ ಭಾರತೀಯ ಕಲಾಸಾಧಕ ಸಂಗಮದಲ್ಲಿ ರಾಮಜನ್ಮಭೂಮಿ ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪನೆಗೊಂಡ ರಾಮಲಲಾ ವಿಗ್ರಹವನ್ನು ನಿರ್ಮಿಸಿದ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಅಭಿನಂದಿಸಿದರು.

ಸಂಪುಟ : 45 | ಸಂಚಿಕೆ : 20 | ಪುಷ್ಯ–ಮಾಘ | ಕಲಿಯುಗಾಬ್ದ 5125 | 15–02–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಶ್ರೀ ಗುರೂಜಿ : ಜೀವನ ಮತ್ತು ವಿಚಾರಗಳು

ರಾಷ್ಟ್ರೀಯ ಸ್ವಯಂಸೇವಕ ಸಂಘದ ಎರಡನೇ ಸರಸಂಘಚಾಲಕರಾಗಿದ್ದವರು ಶ್ರೀ ಮಾಧವರಾವ್ ಸದಾಶಿವರಾವ್ ಗೋಳ್ವಲ್ಕರ್. ಶ್ರೀ ಗುರೂಜಿ ಎಂದೇ ಜನಮಾನಸದಲ್ಲಿ ಪರಿಚಿತರು. 1940ರಲ್ಲಿ ಸಂಘ ಸಂಸ್ಥಾಪಕರಾದ ಡಾ. ಕೇಶವ ಬಲಿರಾಮ್ ಹೆಡಗೇವಾರ್ ಅವರ ನಿಧನದ ನಂತರ ಸಂಘವನ್ನು ಮುನ್ನಡೆಸಿದವರು. 1940ರಿಂದ 1973ರವರೆಗೆ ರಾಷ್ಟ್ರಾದ್ಯಂತ ಸಂಚರಿಸಿ ಸಂಘಕಾರ್ಯಕ್ಕೆ ವೇಗವನ್ನು ಕಲ್ಪಿಸಿಕೊಡುವ ಮೂಲಕ ಭಾರತದ ರಾಷ್ಟ್ರೀಯ ಜೀವನದಲ್ಲಿ ಸಂಘಕ್ಕೆ ಅಗ್ರಗಣ್ಯ ಸ್ಥಾನವನ್ನು ಕಲ್ಪಿಸಿಕೊಟ್ಟವರು.



'ಶ್ರೀ ಗುರೂಜಿಯವರ ವ್ಯಕ್ತಿತ್ವ ಮತ್ತು ಕಾರ್ಯಗಳು ಹಿಮಖಂಡದಂತಿದೆ. ಅದರ ವಾಸ್ತವವಾದ ಗಾತ್ರ ನೀರಿನ ಮೇಲೆ ತೋರುವುದಕ್ಕಿಂತಲೂ ಅನೇಕಪಟ್ಟು ದೊಡ್ಡದಾಗಿದ್ದು ನೀರಿನೊಳಗೆ ಮರೆಯಾಗಿರುತ್ತದೆ. ಹಾಗೆಯೇ ಇಲ್ಲಿರುವ ವಿಚಾರಗಳು ಗಾತ್ರದಲ್ಲಿ ದೊಡ್ಡದೇ ಆದರೂ ಸಮಗ್ರವೂ ಅಲ್ಲ ಸಂಪೂರ್ಣವೂ ಅಲ್ಲ" ಎಂಬ ಶ್ರೀ ಗುರೂಜಿ ಸಮಗ್ರದ ಸಂಪಾದಕೀಯದ ಮಾತುಗಳು ಶ್ರೀ ಗುರೂಜಿಯವರ ಅಗಾಧ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಂತಿದೆ.

ಮಾಧವರಾವ್ ಕ್ರಿ.ಶ. 1906 ಫೆಬ್ರವರಿ 19ರಂದು ನಾಗಪುರದಲ್ಲಿ ಜನಿಸಿದರು. ತಂದೆ ಸದಾಶಿವರಾವ್ ಗೋಳ್ವಲ್ಕರ್ ಮತ್ತು ತಾಯಿ ಲಕ್ಷ್ಮೀಬಾಯಿ. ಬಾಲ್ಯದಿಂದಲೂ ಓದಿನಲ್ಲಿ ಚುರುಕಿದ್ದ ಮಾಧವ ಬಿಎಸ್ಸಿ ಪದವಿ ನಂತರ ಪ್ರಾಣಿಶಾಸ್ತ್ರದಲ್ಲಿ ಎಂಎಸ್ಸಿ ಪದವಿ ಪಡೆದರು. 1929ರಲ್ಲಿ ಚೆನ್ನೈನ ಮತ್ಸ್ಯಾಲಯದಲ್ಲಿ ಸಂಶೋಧನೆಗೆ ತೆರಳಿದರು. ಇದೇ ವೇಳೆಗೆ ಅವರ ತಂದೆ ಕೆಲಸದಿಂದ ನಿವೃತ್ತರಾದ ಕಾರಣ ಸಂಶೋಧನೆಯನ್ನು ಅರ್ಧದಲ್ಲೇ ನಿಲ್ಲಿಸಿ ಬರಬೇಕಾಯಿತು. ನಂತರ 3 ವರ್ಷಗಳ ಕಾಲ ವಾರಣಾಸಿಯ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದರು. ಈ ವೇಳೆ ಮಾಧವರಾವ್ ಅವರಿಗೆ ಅವರ ವಿದ್ಯಾರ್ಥಿಗಳು ಗುರೂಜಿ ಎಂದು ಕರೆಯಲು ಪ್ರಾರಂಭಿಸಿದ ಹೆಸರು ನಂತರ ಪ್ರಖ್ಯಾತಿ ಪಡೆಯಿತು.

ಶ್ರೀ ಗುರೂಜಿಯವರು ಕಾಶಿಗೆ ಬಂದಿದ್ದು 1931ರ ಆಗಸ್ಟ್ ತಿಂಗಳಲ್ಲಿ. ಆದರೆ ಅದೇ ವರ್ಷ ಜುಲೈನಲ್ಲಿ ಡಾ.ಹೆಡಗೇವಾರರ ಭೇಟಿಯ ಕಾರಣದಿಂದ ಕಾಶಿಯ ವಿಶ್ವವಿದ್ಯಾನಿಲಯದ ಪರಿಸರದಲ್ಲಿ ಸಂಘದ ಶಾಖೆ ಆರಂಭಗೊಂಡಿತ್ತು. ಸಂಘದ ಶಾಖೆಗೆ ಬೀಜಾರೋಪಣೆ ಮಾಡಲೆಂದೆ ಅನೇಕರು ಅಲ್ಲಿ ವಿದ್ಯಾಭ್ಯಾಸಕ್ಕಾಗಿ ಸೇರಿದ್ದರು. ಅವರಲ್ಲಿ ಒಬ್ಬರಾದ ಉಮರೇಡಿನ ಪ್ರಭಾಕರ ಬಲವಂತ ದಾಣಿಯವರ (ಭೈಯ್ಯಾಜಿ ದಾಣಿ) ಮೂಲಕ ಗುರೂಜಿಯವರಿಗೆ ಸಂಘದ ಸಂಪರ್ಕ ಬೆಳೆಯಿತು. ಗುರೂಜಿಯವರಿಗೆ ಮೊದಲೇ ಪರಿಚಯವಿದ್ದ ಬಾಬಾ ತೆಲಂಗ್ ಈ ಸ್ನೇಹವೃಂದವನ್ನು ಸೇರಿಕೊಂಡರು.

ಶ್ರೀಗುರೂಜಿಯವರು ಸ್ವಯಂಸೇವಕರೆಲ್ಲ ಸೇರಿ ಸಾರನಾಥದಲ್ಲಿ ಆಯೋಜಿಸಿದ್ದ ವನವಿಹಾರದ ನಂತರ ಕಾಶಿಯ ಶಾಖೆಗೆ ಹೋಗಲು ಪ್ರಾರಂಭಿಸಿದರು. ಇದರ ನಂತರ ಶ್ರೀ ಗುರೂಜಿಯವರು ನಿರಂತರವಾಗಿ ಸಂಘದ ಶಾಖೆಗಳಲ್ಲಿ ತೊಡಗಿಕೊಂಡರು. 1932ರಲ್ಲಿ ನಾಗಪುರದಲ್ಲಿ ಡಾಕರ್‌ಜಿ ಅವರ ಮಾರ್ಗದರ್ಶನದಲ್ಲಿ ನಡೆದ ವಿಜಯದಶಮಿ ಕಾರ್ಯಕ್ರಮದಲ್ಲಿ ಶ್ರೀ ಗುರೂಜಿ ಮತ್ತು ಸದ್ ಗೋಪಾಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

1934ರಲ್ಲಿ ಶ್ರೀ ಗುರೂಜಿ ಅವರು ನಾಗಪುರದ ಕಾರ್ಯವಾಹರಾಗಿ ಜವಾಬ್ದಾರಿ ಸ್ವೀಕರಿಸಿದರು. ಆದರೆ 1936ರಲ್ಲಿ ತಮ್ಮ ಕಾನೂನು ಅಧ್ಯಯನ ಮತ್ತು ಆರ್‌ಎಸ್‌ಎಸ್ ಕಾರ್ಯಗಳನ್ನು ಬಿಟ್ಟು ಪಶ್ಚಿಮ ಬಂಗಾಳದ ರಾಮಕೃಷ್ಣಾಶ್ರಮಕ್ಕೆ ಸನ್ಯಾಸಿ ಆಗಲು ಹೊರಟರು. ಅಲ್ಲಿ ಸ್ವಾಮಿ ಅಖಂಡಾನಂದರ ಶಿಷ್ಯರಾದರು. 1937ರಲ್ಲಿ ಅಖಂಡಾನಂದರ ಮರಣದ ನಂತರ ಗೊಂದಲಕ್ಕೊಳಗಾದ ಶ್ರೀ ಗುರೂಜಿ ಅವರು ಮತ್ತೆ ಡಾಕ್ಟರ್ ಜಿ ಅವರ ಸಲಹೆಗಾಗಿ ನಾಗ್ಪುರಕ್ಕೆ ಬರುತ್ತಾರೆ. ಸಮಾಜಕ್ಕಾಗಿ ಶ್ರಮಿಸಬೇಕೆಂಬ ನಿಮ್ಮ ಇಚ್ಛೆ ಸಂಘದ ಕೆಲಸದ ಮೂಲಕ ನೆರವೇರುತ್ತದೆ ಎಂದು ಮಾರ್ಗದರ್ಶನ ಮಾಡಿ ಸಂಘದ ಮೂಲಕ ರಾಷ್ಟ್ರಕಾರ್ಯಕ್ಕೆ ಮುಂದಾಗಲು ಡಾಕ್ಟರ್‌ಜಿ ಪ್ರೇರೇಪಿಸಿದರು. 1937ರಲ್ಲಿ ಸಂಘದೀಕ್ಷೆಯನ್ನು ಪಡೆದರು. 1937–39ರ ವರೆಗೆ ಶ್ರೀ ಗುರೂಜಿಯವರಿಗೆ ಅಖಿಲ ಭಾರತೀಯ ವರ್ಗಗಳ ಜವಾಬ್ದಾರಿಗಳನ್ನು ನೀಡಲಾಯಿತು. ಇವುಗಳನ್ನು ನಿಭಾಯಿಸಿದ ಅವರ ನಾಯಕತ್ವದ ಗುಣ, ಜನಮಾನಸವನ್ನು ತಲುಪುವ ಅವರ ಮಾತುಗಳು, ಅಧ್ಯಯನದಲ್ಲಿನ ಆಳ, ಬರವಣಿಗೆಯಲ್ಲಿನ ಸ್ಪಷ್ಟತೆ, ಎಲ್ಲರೊಂದಿಗಿನ ಆತ್ಮೀಯತೆ ಡಾಕ್ಟರ್‌ಜಿ ಅವರಿಗೆ ಇಷ್ಟವಾಗಿತ್ತು. ಹಾಗಾಗಿ ಡಾಕ್ಟರ್‌ಜಿ ಶ್ರೀ ಗುರೂಜಿ ಅವರನ್ನು ಸಂಘದ ಮುಂದಿನ ಸರಸಂಘಚಾಲಕರಾಗಬೇಕೆಂದು ಸೂಚಿಸಿದರು.

ಶ್ರೀಗುರೂಜಿಯವರು ಸರಸಂಘಚಾಲಕರಾಗಿದ್ದ 33 ವರ್ಷಗಳು ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ರಾಷ್ಟ್ರೀಯ ವಿಚಾರಧಾರೆ ದೇಶವ್ಯಾಪಿ ಪಸರಿಸುವುದರಲ್ಲಿ ಪ್ರಮುಖ ಪಾತ್ರವಹಿಸಿತು. ದೇಶದ ಉದ್ದಗಲಕ್ಕೂ ಸಂಚರಿಸಿದ ಶ್ರೀ ಗುರೂಜಿ ಅವರು ಪ್ರತಿ ಪ್ರಾಂತಕ್ಕೂ ವರ್ಷದಲ್ಲಿ 2 ಬಾರಿ ಭೇಟಿ ನೀಡಿ ಸಂಘಕಾರ್ಯಕ್ಕೆ ಪುಷ್ಠಿ ನೀಡಿದರು.

**ಹಿಂದೂ ಸಂಘಟನೆಯ ಮಹತ್ವ:** "ಮಾನವಕೋಟಿಗೆ ಹಿಂದುದೇಶ, ಹಿಂದುರಾಷ್ಟ್ರಗಳ ಅಸದೃಶ ಜ್ಞಾನದ ಕೊಡುಗೆಯನ್ನು, ಜಗತ್‌ಕಲ್ಯಾಣ ಮತ್ತು ಐಕ್ಯಸಾಧನೆಯ ಧ್ಯೇಯದಲ್ಲಿ ಸಫಲರಾಗಬೇಕಾದಲ್ಲಿ, ಜಗತ್ತಿನಮುಂದೆ, ಪುನಶ್ಚೇತನಗೊಂಡ ರಾಷ್ಟ್ರವಾಗಿ ನಾವು ಆತ್ಮವಿಶ್ವಾಸಭರಿತ ರೂಪಗೊಂಡು ಎದ್ದುನಿಲ್ಲಬೇಕಾದದ್ದು ಅನಿವಾರ್ಯ. ಯುಗಯುಗಗಳ ನಮ್ಮ ರಾಷ್ಟ್ರೀಯ ಜೀವನೋದ್ದೇಶವನ್ನು ಸಾಧಿಸಬೇಕಾದಲ್ಲಿ, ಅದರ ಮೊದಲ ಹೆಜ್ಜೆಯಾಗಿ ಚದುರಿಹೋಗಿರುವ ಹಿಂದೂ ಸಮಾಜ ಶಕ್ತಿ ಅಂಶಗಳನ್ನು ಸಂಘಟಿಸಿ, ಅದನ್ನು ಆಧ್ಯಾತ್ಮಿಕ ಹಾಗೂ ಬೌದ್ಧಿಕ ಸ್ತರ ಎರಡರಲ್ಲಿಯೂ, ಅಜೇಯಶಕ್ತಿಯಾಗಿ ರೂಪಿಸುವ ಮಹಾನ್ ಕಾರ್ಯ" ಎಂದು ಹೇಳಿದರು.

**ವೀರಭೋಗ್ಯಾ ವಸುಂಧರಾ:** ಸತ್ವದ ಕ್ರಿಯಾಚೈತನ್ಯದಿಂದ, ವಿಜಯಾಕಾಂಕ್ಷೆಯಿಂದ ನಮ್ಮ ಜನ ಉದ್ದೀಪ್ತರಾದಾಗ ಶತ್ರುಗಳ ರಾಕ್ಷಸಸಾಮ್ರಾಜ್ಯಗಳು ಧೂಳಿಪಟವಾದುವು ಎಂಬುದನ್ನು ಚರಿತ್ರೆ ತೋರಿಸಿಕೊಟ್ಟಿದೆ. ದೇವತೆಗಳು ಮತ್ತು ರಾಕ್ಷಸರ ನಡುವಿನ ಹೋರಾಟವನ್ನು ಚಿತ್ರಿಸುವ ನಮ್ಮ ಪುರಾಣಗಳು ಕಲಿಸುವ ಪಾಠವೂ ಇದೇ. ದೈವತ್ವವಿದ್ದೂ ದೇವತೆಗಳು ಸಂಘಟಿತರೂ, ಆಕ್ರಮಣಕಾರಿಗಳೂ ಆದ ರಾಕ್ಷಸರ ಕೈಯಲ್ಲಿ ಎಷ್ಟೋ ಬಾರಿ ಸೋಲನ್ನು ಅನುಭವಿಸುವುದನ್ನು ಕಾಣುತ್ತೇವೆ. ದೇವತೆಗಳು ವೀರಾವೇಶವನ್ನು ಜಾಗೃತಗೊಳಿಸಿಕೊಂಡಾಗಲೇ ರಾಕ್ಷಸರು ಸೋತದ್ದು. ಚಟುವಟಿಕೆ, ಚೈತನ್ಯ ಶೀಲತೆಗಳಿಂದಲೇ ವಿಜಯಶಾಲಿ ಜೀವನದ ತತ್ತ್ವವನ್ನು ಒಳಗೊಂಡ 'ವೀರಭೋಗ್ಯಾ ವಸುಂಧರಾ'ವಾಗಿ ನಮ್ಮ ನಾಡು ಉಳಿಯಬೇಕು ಎಂದು ತಿಳಿಸಿದ್ದರು.

**ರಾಷ್ಟ್ರಪೂಜೆಯೊಂದೆ ಆದ್ಯತೆ:** "ನಮ್ಮ ಕಾರ್ಯ ರಾಷ್ಟ್ರಪೂಜೆಯದು, ವ್ಯಕ್ತಿಪೂಜೆಗೆ ಅದರಲ್ಲಿ ಸ್ಥಾನವಿಲ್ಲ. ಶರೀರ ಹೇಗಿದ್ದರೂ ನಶ್ವರವೇ. ಜೀವ ಹೋದನಂತರ ಶವದ ಶೃಂಗಾರ ಇತ್ಯಾದಿಗಳು ವಿಚಿತ್ರವೆನಿಸುತ್ತದೆ. ಅದೇ ರೀತಿ ಸಂಘದ ಧ್ಯೇಯ ಮತ್ತು ಧ್ಯೇಯ ದರ್ಶನ ಮಾಡಿಸುವ ಸಂಸ್ಥಾಪಕರನ್ನು ಬಿಟ್ಟು ಇನ್ಯಾವುದೇ ವ್ಯಕ್ತಿಯ ಮಹತ್ವ ಹೆಚ್ಚಿಸುವುದಾಗಲಿ, ಅವರ ಸ್ಮಾರಕ ರಚಿಸುವುದಾಗಲಿ ಅವಶ್ಯವಿಲ್ಲದ್ದು." ಎನ್ನುವ ಮಾತುಗಳ ಮೂಲಕ ಶ್ರೀ ಗುರೂಜಿ ಸಂಘದ ಧ್ಯೇಯದ ಜೊತೆಗೆ ರಾಷ್ಟ್ರಕ್ಕಾಗಿ ಕೆಲಸ ಮಾಡುವಾಗ ನಮ್ಮ ಭಾವ ಹೇಗಿರಬೇಕೆನ್ನುವುದನ್ನೂ ಮಾರ್ಮಿಕವಾಗಿ ತಿಳಿಸುತ್ತಾರೆ.

**ಸಾಮಾಜಿಕ ಸಾಮರಸ್ಯ:** ಅಸ್ಪೃಶ್ಯತೆಯೆನ್ನುವುದು ಈ ನಾಡಿನ ಐಕ್ಯತೆಗೆ ತರಬಹುದಾದ ತೊಂದರೆಯನ್ನು ಗುರೂಜಿ ಅರಿತಿದ್ದರು. "ಅಸ್ಪೃಶ್ಯತೆ ಎನ್ನುವುದು ಸವರ್ಣೀಯ ಸಮಾಜದ ಮನಸ್ಸಿನ ಕೊಳೆ. ಅದೊಂದು ಮಾನಸಿಕ ವಿಕೃತಿ. ಅಸ್ಪೃಶ್ಯತೆಯ ನಿವಾರಣೆ ಎಂದರೆ ಸವರ್ಣೀಯರ ಈ ಸಂಕುಚಿತ ಮನೋಭಾವವನ್ನು ತೆಗೆದುಹಾಕುವುದು ಎಂದರ್ಥ." ಎಂದಿದ್ದಲ್ಲದೆ ಸಮಾಜದಲ್ಲೂ ಸಹೋದರತ್ವ ತರಲು ಹಲವು ಪ್ರಯತ್ನಗಳಿಗೆ ಗುರೂಜಿ ಕಾರಣೀಭೂತರಾದರು.

ಶ್ರೀ ಗುರೂಜಿ ಅವರ ಪ್ರಕಾರ ಮೂರು ರೀತಿಯಲ್ಲಿ ಸಮಾಜದ ಪರಿವರ್ತನೆಯ ಪ್ರಯತ್ನ ನಡೆಯಬೇಕು. ಮೊದಲನೆಯದು ಅಸ್ಪೃಶ್ಯತೆಯನ್ನು ಆಚರಿಸುತ್ತಿರುವ ಸವರ್ಣೀಯ ಸಮಾಜದಲ್ಲಿ ಶ್ರೇಷ್ಠತೆಯ ವ್ಯಸನ ತೊಲಗಬೇಕು. ಎರಡನೆಯದಾಗಿ ಅಸ್ಪೃಶ್ಯತೆ ಹಾಗೂ ಜಾತೀಯ ತಾರತಮ್ಯಕ್ಕೊಳಗಾಗಿ ಕೀಳರಿಮೆಯಲ್ಲಿ ನರಳುತ್ತಿರುವವರು ಸಮಾಜದ ಮುಖ್ಯಭೂಮಿಕೆಗೆ ಬರಲು ಪ್ರಯತ್ನಿಸಬೇಕು. ಮೂರನೆಯದಾಗಿ ಈ ಆಚರಣೆಗಳಿಗೆ ಧಾರ್ಮಿಕ ಮಾನ್ಯತೆ ಕೊಟ್ಟಿರುವ ಮಠಾಧೀಶರು ಹಾಗೂ ಧಾರ್ಮಿಕ ನೇತಾರರು "ನಮ್ಮ ಧರ್ಮದಲ್ಲಿ ಅಸ್ಪೃಶ್ಯತೆಗೆ ಮಾನ್ಯತೆ ಇಲ್ಲ" ಎನ್ನುವುದನ್ನು ಗಟ್ಟಿಧ್ವನಿಯಲ್ಲಿ ಹೇಳಬೇಕು ಮತ್ತು ಧಾರ್ಮಿಕ ನೇತೃತ್ವ ವಹಿಸಿದವರಿಂದಲೇ ಈ ನಿಟ್ಟಿನಲ್ಲಿ ಪ್ರಯತ್ನಗಳು ಮೂಡಿಬರಬೇಕು. ಶ್ರೀ ಗುರೂಜಿ ಅವರು ಅದಕ್ಕಾಗಿ ದೇಶದುದ್ದಗಲ ಸಂಚರಿಸಿ ಆ ಪ್ರಯತ್ನಗಳಿಗೆ ವೇಗ ತುಂಬಿದರು. ಸಂತಸಮ್ಮೇಳನಗಳನ್ನು ಆಯೋಜಿಸಿದರು. ವಿವಿಧ ಪೀಠಗಳ, ಪಂಥಗಳ ಸಂತರು ಒಂದೇ ವೇದಿಕೆಯಲ್ಲಿ ಒಟ್ಟಾಗಿ ಅಸ್ಪೃಶ್ಯತೆಯ ವಿರುದ್ಧ ನಿಂತರು.

1966ರ ಜನವರಿ 22, 23 ಮತ್ತು 24ರಂದು ಪ್ರಯಾಗದ ಕುಂಭಮೇಳದಲ್ಲಿ ನಡೆದ ಐತಿಹಾಸಿಕ ಸಂತ ಸಮ್ಮೇಳನದಲ್ಲಿ 'ನ ಹಿಂದುಃ ಪತಿತೋ ಭವೇತ್' ಎಂಬ ಘೋಷವಾಕ್ಯ ಮೊಳಗಿಬಂದಿತ್ತು. 1969ರ ಡಿಸೆಂಬರ್ 13 ಮತ್ತು 14ರಂದು ಉಡುಪಿಯಲ್ಲಿ ನಡೆದ ಸಂತ ಸಮ್ಮೇಳನದಲ್ಲಿ 'ಹಿಂದವಃ ಸೋದರಾ ಸರ್ವೇ' ಎಂಬ ಐತಿಹಾಸಿಕ ಘೋಷಣೆ ಮೂಡಿಬಂತು. 1969ರ ಉಡುಪಿಯ ಸಂತಸಮ್ಮೇಳನದಲ್ಲಿ ಸಮ್ಮೇಳನದ ಅಧ್ಯಕ್ಷತೆಯನ್ನು ಅಸ್ಪೃಶ್ಯರೆನಿಸಿದ್ದ ಸಮಾಜದಲ್ಲಿ ಹುಟ್ಟಿದ, ಅಂದಿನ ಲೋಕಸೇವಾ ಆಯೋಗದ ಅಧ್ಯಕ್ಷರಾಗಿದ್ದ ಕೆ. ಎಸ್. ಭರಣಯ್ಯನವರು ವಹಿಸಿದ್ದರು. ಗುರೂಜಿ ಗೋಳ್ವಲ್ಕರ್ ಹಾಗೂ ಪೇಜಾವರ ಶ್ರೀಗಳ ನೇತೃತ್ವದ ಈ ಕಾರ್ಯಕ್ರಮ ಸಾಮರಸ್ಯದ ಪ್ರಯತ್ನಗಳಿಗೆ ಹೊಸಬಾಗಿಲನ್ನೇ ತೆರೆಯಿತು. ಅಸ್ಪೃಶ್ಯತೆಯನ್ನು ತೊಡೆದು ಹಾಕುವತ್ತ ಲಕ್ಷಾಂತರ ಮಂದಿ ಮುಂದಾದರು. ಚರ್ಚೆಯೊಂದರಲ್ಲಿ ಮಾತನಾಡುತ್ತಾ "ಜಗದ್ಗುರುಗಳಾದ ನಿಮ್ಮ ಜಗತ್ತಿನಲ್ಲಿ ಅಸ್ಪೃಶ್ಯರು, ವಂಚಿತರು, ವನವಾಸಿಗಳು ಇದ್ದಾರೆಯೇ? ಅವರಾರೂ ಇಲ್ಲದ ಪುಟ್ಟ ಜಗತ್ತಿಗೇಕೆ ಜಗದ್ಗುರುಗಳಾಗುತ್ತೀರಿ? ಸಮಾಜದ ಎಲ್ಲರನ್ನು ತೆರೆದ ಬಾಹುಗಳಲ್ಲಿ ಅಪ್ಪಿಕೊಂಡು ನೈಜ ಜಗದ್ಗುರುಗಳಾಗಿರಿ" ಎಂದಿದ್ದರು ಶ್ರೀ ಗುರೂಜಿ.

1947ರಲ್ಲಿ ಭಾರತಕ್ಕೆ ಸ್ವರಾಜ್ಯ ದೊರೆತು, ರಾಷ್ಟ್ರ ವಿಭಜನೆಗೊಂಡಾಗ ಪಾಕಿಸ್ತಾನದಲ್ಲಿದ್ದ ಹಿಂದುಗಳ ರಕ್ಷಣೆಗೆ ಧಾವಿಸಲು ಶ್ರೀ ಗುರೂಜಿ ಸ್ವಯಂಸೇವಕರಿಗೆ ಕರೆಕೊಟ್ಟರು. ಕಾಶ್ಮೀರವನ್ನು ಭಾರತಕ್ಕೆ ಸೇರಿಸಲು ರಾಜ ಹರಿಸಿಂಗ್ ಒಪ್ಪಿದ್ದು ಶ್ರೀಗುರೂಜಿ ಅವರೊಂದಿಗಿನ ಸಂವಾದದ ನಂತರ ಎನ್ನುವುದನ್ನು ಹಲವು ಉಲ್ಲೇಖಗಳು ತಿಳಿಸುತ್ತವೆ. 1948ರಲ್ಲಿ ಕಾಶ್ಮೀರಕ್ಕಾಗಿ ಪಾಕಿಸ್ತಾನ ಮಾಡಿದ ದಾಳಿಯನ್ನು, 1962ರಲ್ಲಿ ಚೀನಾ ವಿರುದ್ಧದ ಯುದ್ಧವನ್ನು ಎದುರಿಸುವಲ್ಲಿ ಭಾರತೀಯ ಸೈನಿಕರಿಗೆ ಸ್ವಯಂಸೇವಕರು ನೆರವಾಗಿದ್ದನ್ನೂ ಇತಿಹಾಸ ಮರೆತಿಲ್ಲ. ಅಂತಹ ಸ್ವಯಂಸೇವಕರ ಸೃಷ್ಟಿಗೆ ಮತ್ತವರ ಮನೋಧರ್ಮದ ವಿಕಾಸಕ್ಕೆ ಪ್ರೇರಣೆಯಾದವರು ಶ್ರೀಗುರೂಜಿ.

## ಸಂಸ್ಮರಣೆ | ಪಂಜೆ ಮಂಗೇಶರಾಯರು (22 ಫೆಬ್ರವರಿ, 1874 – 24 ಅಕ್ಟೋಬರ್, 1937)

"ನಾಗರ ಹಾವೇ ಹೂವೊಳು ಹೂವೆ, ಬಾಗಿಲ ಬಿಲದಲಿ ನಿನ್ನಯ ಠಾವೆ", "ಎಲ್ಲಿ ಭೂರಮೆದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ" ಮೊದಲಾದ ಹಾಡುಗಳಿಂದ ಕಾವ್ಯತ್ವದ ಶಕ್ತಿಯನ್ನು ಎಳೆಯರಿಂದ ಹಿರಿಯರವರೆಗೂ ಪಸರಿಸಿದ ಅದ್ಭುತ ಬರಹಗಾರರು ಪಂಜೆ ಮಂಗೇಶರಾಯರು.

ರಾಮಪ್ಪಯ್ಯ ಮತ್ತು ಶಾಂತಾದುರ್ಗಾ ದಂಪತಿಗಳ ಪುತ್ರರಾಗಿ 1874ನೆಯ ಫೆಬ್ರವರಿ 22ರಂದು ದಕ್ಷಿಣ ಕನ್ನಡದ ಬಂಟ್ವಾಳದಲ್ಲಿ ಜನಿಸಿದ ಇವರು ಹುಟ್ಟೂರಿನಲ್ಲಿಯೇ ಪ್ರಾಥಮಿಕ ಶಿಕ್ಷಣ ಪಡೆದು, ಮಂಗಳೂರಿನಲ್ಲಿ ಇಂಟರ್ ಮೀಡಿಯೇಟ್ ವ್ಯಾಸಂಗ ಮಾಡಿದರು. ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನಕ್ಕೆ ಪಾದಾರ್ಪಣೆ ಮಾಡಿದರು. ಬದುಕನ್ನು ಅಧ್ಯಾಪನಕ್ಕೆ ಮಾತ್ರ ಮೀಸಲಾಗಿಸದೆ, ಸಾಹಿತ್ಯ, ಸಾಮಾಜಿಕ ಕ್ಷೇತ್ರದತ್ತಲೂ ದೃಷ್ಟಿ ಹಾಯಿಸಿ ಪ್ರಸಿದ್ಧರಾದರು.

ಹರಟೇಮಲ್ಲ, ರಾ. ಮ. ಪಂ, ಕವಿಶಿಷ್ಯ ಮುಂತಾದ ಹೆಸರುಗಳಲ್ಲಿ ಹಲವಾರು ಬರಹಗಳನ್ನು ರಚಿಸಿದ್ದರು. ಕೊಡವರ ಜೀವನ ವಿಧಾನವನ್ನು ಸರಳ ಭಾಷೆಯಲ್ಲಿ ಅರ್ಥವತ್ತಾಗಿ ಮಂಗೇಶರಾಯರು ವರ್ಣಿಸಿದ ಹುತ್ತರಿ ಹಾಡು ಕೊಡಗಿನ ನಾಡಗೀತೆ ಎಂದೇ ಪ್ರಸಿದ್ಧಿಯನ್ನು ಪಡೆದುದು, ಮಂಗೇಶರಾಯರ ಕಾವ್ಯ ಶೈಲಿಗೆ ಹಿಡಿದ ಕೈಗನ್ನಡಿಯಾಗಿದೆ.

ಆಡುಭಾಷೆಯ ಪದಗಳ ಬಳಕೆ, ಲಯಬದ್ಧ ರಚನೆ ಹಾಗೂ ಸರಳ ವರ್ಣನೆ ಮೂಲಕ ವಿಷಯವನ್ನು ಮಕ್ಕಳಿಗೆ ಮನದಟ್ಟಾಗುವಂತೆ ಹೇಳುವುದರಲ್ಲಿ ಪಂಜೆಯವರು ಪರಿಣತರು. ಕವನಗಳು ಮಾತ್ರವಲ್ಲದೆ, ಮಕ್ಕಳ ಕಥೆಗಳನ್ನೂ ರಚಿಸಿ, ಮಕ್ಕಳಸಾಹಿತಿ ಎಂದೇ ಪ್ರಸಿದ್ಧರಾದರು.



ಕಾದಂಬರಿ, ಲೇಖನಗಳಲ್ಲಿಯೂ ಉತ್ಕೃಷ್ಟ ವಿಚಾರಧಾರೆಗಳನ್ನು ಪ್ರಚುರಪಡಿಸಿದರು. ಶಬ್ದಮಣಿದರ್ಪಣಂ, ಪಂಚಕಜ್ಜ, ಐತಿಹಾಸಿಕ ಕಥಾವಳಿ, ಕೋಟಿ ಚೆನ್ನಯ ಮುಂತಾದವುಗಳು ಇವರ ಅತ್ಯಂತ ಪ್ರಮುಖ ಕೃತಿಗಳಾಗಿವೆ.

"ಪಂಜೆಯವರು ಕಥೆ, ಕವನಗಳನ್ನು ಬರೆಯುವ ಕಸುಬು ಮಾಡಿದವರಲ್ಲ. ಬರೆಯಬೇಕೆಂಬ ಅಂತಃಪ್ರೇರಣೆ ಒತ್ತೊತ್ತಿ ಬಂದಾಗ ಮಾತ್ರ ಬರೆದವರು. ಆಗ ಕೂಡ ಬಹಳ ಸಂಯಮದಿಂದ ಬರೆದವರು. ಪಂಜೆಯವರು ಇಂಗ್ಲಿಷಿನಲ್ಲಿ ವಿದ್ವಾಂಸರೇ ಆಗಿದ್ದರೂ ಆ ಸಾಹಿತ್ಯವನ್ನು ಸವಿದು ಮೆಚ್ಚಿ ನಲಿದವರೇ ಆದರೂ, ಅವರು ಬರೆದುದೆಲ್ಲ ಇಂಗ್ಲಿಷ್ ಕಲಿಯದವರಿಗಾಗಿ, ಕೇವಲ ಕನ್ನಡವನ್ನು ಬಲ್ಲ ಸಾಮಾನ್ಯರ ಸಂತೋಷಕ್ಕಾಗಿ, ಹೃದಯ ಸಂಸ್ಕಾರಕ್ಕಾಗಿ" ಎಂದು ಪಂಜೆಯವರನ್ನು ತೀರಾ ಹತ್ತಿರದಿಂದ ಕಂಡ ಸೇಡಿಯಾಪು ಕೃಷ್ಣ ಭಟ್ಟರು ನುಡಿಯುತ್ತಾರೆ. ಈ ಮಾತುಗಳು ಕನ್ನಡ ಸಾಹಿತ್ಯದ ಏಳ್ಗೆಯಲ್ಲಿ ಪಂಜೆ ಮಂಗೇಶರಾಯರ ಪಾತ್ರದ ಸ್ಪಷ್ಟ ಚಿತ್ರಣವನ್ನು ಒದಗಿಸಿಕೊಡುತ್ತದೆ ಎಂದರೆ ಉತ್ಪ್ರೇಕ್ಷೆಯಲ್ಲ!

ಮಂಗೇಶರಾಯರು 1943ರಲ್ಲಿ ಅಧ್ಯಾಪನ ವೃತ್ತಿಯಿಂದ ಸ್ವಯಂನಿವೃತ್ತಿ ಪಡೆದು ಮಂಗಳೂರಿಗೆ ಹಿಂದಿರುಗಿ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಕೊಂಡರು. ತತ್ಫಲವಾಗಿ 1934ರಲ್ಲಿ ರಾಯಚೂರಿನಲ್ಲಿ ಸಮಾವೇಶಗೊಂಡ ಇಪ್ಪತ್ತನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಅವರಿಗೆ ಲಭಿಸಿತು. ಇಂತಹ ಮೇರು ಸಾಹಿತಿ 1937 ಅಕ್ಟೋಬರ್ 24ರಂದು ವಿಧಿವಶರಾದರು.

## ನಾನಾ ಪಾಲ್ಕರ್ ರುಗ್ಣ ಸೇವಾ ಸದನ

ಸಿಲಿಗುಡಿಯ ಯಾರೋ ವಿಕಾಸ ಚಕ್ರವರ್ತಿ ತಮ್ಮ ಮಗನ ವಿವಾಹಕ್ಕೆ ನನಗೇಕೆ ವಿಮಾನ ಟಿಕೆಟ್ ಕಳುಹಿಸಿದ್ದಾರೆ ಎಂಬ ಗೊಂದಲ ಕೃಷ್ಣಮಹಾದಿಕ್ ಅವರದು! ಅದು ಸುಮಾರು 20 ವರ್ಷಗಳ ಹಿಂದಿನ ಕಥೆ. ಅಂದು ಇದೇ ವಿಕಾಸ ಚಕ್ರವರ್ತಿ ಉಲ್ಬಣಿಸಿದ್ದ ಕಾಯಿಲೆಯ ಚಿಕಿತ್ಸೆಗಾಗಿ ತಮ್ಮ ಮಗನನ್ನು ಮುಂಬಯಿಯ ಟಾಟಾ ಮೆಮೋರಿಯಲ್ ಆಸ್ಪತ್ರೆಗೆ ಕರೆತಂದಿದ್ದರು. ಆಗ ಅವರ ಕುಟುಂಬದವರೆಲ್ಲಾ ನಾನಾ ಪಾಲ್ಕರ್ ಸ್ಮೃತಿ ಸಮಿತಿಯ ರುಗ್ಣಸೇವಾ ಸದನದಲ್ಲಿ ಉಳಿದುಕೊಂಡಿದ್ದರು. ಆಗ ಆ ಸಮಿತಿಯ ಪ್ರಬಂಧಕರಾಗಿದ್ದವರು ಸಂಘದ ಸ್ವಯಂಸೇವಕ ಕೃಷ್ಣಮಹಾದಿಕ್.

ಅಲ್ಲಿಗೆ ಬರುತ್ತಿದ್ದ ನೂರಾರು ಕುಟುಂಬಗಳಂತೆಯೇ ಈ ಬಂಗಾಲಿ ಮಧ್ಯಮ ವರ್ಗದ ಕುಟುಂಬದವರಿಗೂ ಉಚಿತ ಊಟ ಮತ್ತು ವಸತಿಯ ಜೊತೆಯಲ್ಲಿ ಉಳಿದೆಲ್ಲ ತರಹದ ಸಹಾಯವೂ ದೊರೆತಿತ್ತು. 5 ವರ್ಷ ವಯಸ್ಸಿನ ವಿದುರನ್ ಗಂಭೀರವಾದ ರಕ್ತದ ಕ್ಯಾನ್ಸರಿನಿಂದ ಬಳಲುತ್ತಿದ್ದ. ಲಕ್ಷಕ್ಕೆ ಒಬ್ಬರು ಮಾತ್ರ ಬದುಕುಳಿಯುವ ಸಾಧ್ಯತೆ ಇರುವ ಕುಖ್ಯಾತಿ ಹೊಂದಿದ್ದ ಈ ಹೆಮ್ಮಾರಿಯನ್ನು ಹೊಡೆದೋಡಿಸಲು ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟೇಶನ್ ಅನಿವಾರ್ಯವಿತ್ತು. 1997ರಲ್ಲಿ ವೈದ್ಯರು ಹೇಳಿದ್ದ 13 ಲಕ್ಷ ರೂಪಾಯಿಗಳನ್ನು ಹೊಂದಿಸುವುದು ಆ ಕುಟುಂಬದ ಕಲ್ಪನೆಗೂ ಮೀರಿದ್ದಾಗಿತ್ತು. ಆಗ ಮುಂಬಯಿಯ ನಾನಾ ಪಾಲ್ಕರ್ ಸ್ಮೃತಿ ಸಮಿತಿಯು ಈ ಪರಿವಾರಕ್ಕೆ ಸಹಾಯ ಮಾಡುವ ಹೊಣೆ ಹೊತ್ತಿತ್ತು.



ಇಂದು IIT ಯಿಂದ ಇಂಜಿನಿಯರ್ ಪದವಿ ಪಡೆದಿರುವ ವಿದುರನ್ ತನಗೆ ಪುನರ್ಜನ್ಮ ನೀಡಿದ್ದ ಕೃಷ್ಣ ಚಾಚಾರನ್ನು ಮರೆತಿರಲಿಲ್ಲ. ಅದಕ್ಕೆಂದೇ, ವಿಕಾಸ ಚಕ್ರವರ್ತಿಯವರು ತಮ್ಮ ಮಗನ ವಿವಾಹದ ಮೊದಲ ಆಮಂತ್ರಣ ಪತ್ರಿಕೆಯನ್ನು ದೇವರ ಮುಂದಿಡದೇ, ಸಮಿತಿಯ ಕಾರ್ಯಕರ್ತರ ಮುಂದಿರಿಸಿದ್ದರು. ವಿದುರನ್ ತರಹದ ಅದೆಷ್ಟೋ ರೋಗಿಗಳು ಕ್ಯಾನ್ಸರಿನಂತಹ ಭೀಕರ ಖಾಯಿಲೆಯ ಚಿಕಿತ್ಸೆಗಾಗಿ ಟಾಟಾ ಮೆಮೋರಿಯಲ್ ಆಸ್ಪತ್ರೆಗೆ ಬಂದಾಗಲೆಲ್ಲಾ, ನಾನಾ ಪಾಲ್ಕರ್ ರುಗ್ಣ ಸೇವಾ ಸದನವೇ ಅವರಿಗೆಲ್ಲಾ ಮನೆ ಹಾಗೂ ಸಮಿತಿಯ ಸದಸ್ಯರೇ ಅವರ ಬಂಧುಗಳು. ರೋಗಿಗಳಿಗಾಗಿ ಮತ್ತು ಅವರನ್ನು ನೋಡಿಕೊಳ್ಳುವವರಿಗಾಗಿ ಒಂದು ತಿಂಗಳವರೆಗೆ 5 ರೂಪಾಯಿಯ ತಿಂಡಿ ಹಾಗೂ 10 ರೂಪಾಯಿಯ ಊಟ ಮಾತ್ರವಲ್ಲದೆ ಉಚಿತ ವಸತಿ ಸೌಲಭ್ಯವನ್ನೂ ಸಮಿತಿ ಕಲ್ಪಿಸಿತ್ತು. 1968ರಲ್ಲಿ ಕೆಲವೇ ಕೊಠಡಿಗಳಿಂದ ಪ್ರಾರಂಭವಾದ ಈ ಸಮಿತಿ ಇಂದು ಹತ್ತು ಅಂತಸ್ತಿನ ಕಟ್ಟಡವಾಗಿ ಬೆಳೆದಿದೆ. ಇದರಲ್ಲಿ ಇಂದು ಡಯಾಲಿಸಿಸ್ ಪ್ಯಾಥಾಲಜಿ ಲ್ಯಾಬ್, 14 ಡಯಾಲಿಸಿಸ್ ಯಂತ್ರಗಳು, ಟಿಬಿ ಚಿಕಿತ್ಸಾ ಕೇಂದ್ರ, ಯೋಗ ಪ್ರಶಿಕ್ಷಣ ಕೇಂದ್ರ, ಆಂಬ್ಯುಲೆನ್ಸ್ ಸೇವೆ ಹಾಗೂ ಚಿಕಿತ್ಸಾ ಕೇಂದ್ರಗಳೆಲ್ಲ ಸುಗಮವಾಗಿ ಕಾರ್ಯನಿರ್ವಹಿಸುತ್ತಿವೆ.


ಅಂದು ವಿದುರನ್ ಚಿಕಿತ್ಸೆಯ ನಂತರದ ಸಮಸ್ಯೆ ಚಿಕಿತ್ಸೆಯನ್ನು ಮುಂದುವರಿಸಲು ಆಗುವ ಖರ್ಚಿನದಾಗಿತ್ತು. ಆಗ ಸಮಿತಿಯು ಮುಂದೆ ಬಂದು ಕೆಲ ದಾನಿಗಳ ಮುಖಾಂತರ ಒದಗಿಸಿದ 2 ಲಕ್ಷ ರೂಪಾಯಿಗಳ ಸಹಾಯದೊಂದಿಗೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿಯವರ 4 ಲಕ್ಷ ರೂಪಾಯಿಗಳ ಉದಾರ ಧನಸಹಾಯವೂ ಬಂದು ಸೇರಿತು.

ಇಂದು ಬೆಂಗಳೂರಿನಲ್ಲಿ ಎಸೆಂಚರ್ ಕಂಪನಿಯಲ್ಲಿ ಸೀನಿಯರ್ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ವಿದುರನ್ ಚಕ್ರವರ್ತಿಯ ಬಾಲ್ಯದಲ್ಲಿ ನಡೆದ ಯಶಸ್ವಿ ಶಸ್ತ್ರಚಿಕಿತ್ಸೆಯನ್ನು ವೈದ್ಯಕೀಯ ಪವಾಡವೆಂಬಂತೆ ಇಂದಿಗೂ ಅಮೇರಿಕಾದ ವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲಾಗುತ್ತಿದೆ. ಇದೆಲ್ಲಾ ವೈದ್ಯರ ಪರಿಶ್ರಮದಿಂದ ಮಾತ್ರವಲ್ಲದೆ ಸಮಿತಿಯ ಕಾರ್ಯಕರ್ತರ ಸ್ನೇಹ, ಸಹಕಾರ ಹಾಗೂ ಹಾರೈಕೆಗಳಿಂದ ಸಾಧ್ಯವಾಯಿತೆಂದು ವಿಕಾಸರು ನಂಬಿದ್ದಾರೆ. ಇಂತಹ ಅದೆಷ್ಟೋ ಮನಮುಟ್ಟುವ ಕಥೆಗಳಿಗೆ ರುಗ್ಣಸೇವಾ ಸದನವು ಕಾರಣವಾಗಿದೆ. ಆರ್.ಎಸ್.ಎಸ್. ಪ್ರಚಾರಕರಾಗಿದ್ದ ಸ್ವರ್ಗೀಯ ನಾನಾ ಪಾಲ್ಕರ‌ರವರ ನೆನಪಿನಲ್ಲಿ ರಚಿತವಾದ ಈ ರುಗ್ಣಸೇವಾ ಸದನವು ಬಡ ರೋಗಿಗಳು ಮತ್ತು ಅವರ ಮನೆಮಂದಿಯ ಪಾಲಿಗೆ ದೇವಾಲಯವೇ ಆಗಿಹೋಗಿದೆ. ಇತರೆಡೆ ಸಾವಿರಾರು ರೂಪಾಯಿಗಳಷ್ಟು ಶುಲ್ಕವಿರುವ ಡಯಾಲಿಸಿಸನ್ನು ಇಲ್ಲಿ ಕೇವಲ 350 ರೂಪಾಯಿಗಳಲ್ಲಿ ಮಾಡಲಾಗುತ್ತಿದೆ. ಅಂತಹ 1,50,000ಕ್ಕೂ ಹೆಚ್ಚು ಡಯಾಲಿಸಿಸುಗಳನ್ನು ಸದನದ ಡಯಾಲಿಸಿಸ್ ಸೆಂಟರಿನಲ್ಲಿ 2004ರಿಂದ ಇಲ್ಲಿಯವರೆಗಿನ ಅವಧಿಯಲ್ಲಿ ಮಾಡಲಾಗಿದೆ. ಈ ಸಮಿತಿಯು ಮಾಸಿಕ ಆರೂವರೆ ಲಕ್ಷ ರುಪಾಯಿಗಳನ್ನು ವಿವಿಧ ಚಿಕಿತ್ಸಾ ಕೇಂದ್ರಗಳಲ್ಲಿರುವ ಅನಾರೋಗ್ಯಪೀಡಿತರ ಶಸ್ತ್ರಚಿಕಿತ್ಸೆ ಇತ್ಯಾದಿಗಳಿಗಾಗಿ ವ್ಯಯಿಸುತ್ತಿದೆ. ಕಳೆದ 9 ತಿಂಗಳ ಹಿಂದೆ ಕೀಮೋ ಥೆರಪಿಯನ್ನೂ ಆರಂಭಿಸಲಾಗಿದ್ದು ಇಲ್ಲಿಯವರೆಗೂ 1300 ಕೀಮೋ ಥೆರಪಿಗಳನ್ನು ಮಾಡಲಾಗಿದೆ. ವಾಡಿಯಾ ಆಸ್ಪತ್ರೆಯಲ್ಲಿ ಬಾಣಂತಿಯರಿಗೆ ಶುಲ್ಕರಹಿತ ಊಟದ ವ್ಯವಸ್ಥೆಯನ್ನೂ ಮಾಡಲಾಗಿದೆ. ಮುಂಬಯಿಯ ಯಾವೊಬ್ಬ ರೋಗಿಯೂ ಚಿಕಿತ್ಸೆಯಿಂದ ವಂಚಿತನಾಗದಿರುವಂಥ ವ್ಯವಸ್ಥೆ ನಿರ್ಮಿಸುವುದು ಈ ಸಮಿತಿಯ ಗುರಿಯಾಗಿದೆ.

ಸಂಪರ್ಕ: **ಕೃಷ್ಣ ಮಹಾದಿಕ್**, ಮೊ.: 9969612553

## ಎಲ್ಲೋ ಕೇಳಿದ ಕಥೆ

### ನಾಯಕನ ಮಾತು ಶಿರೋಧಾರ್ಯ



ಜಂಗಲ್ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವ ಸಲುವಾಗಿ ಡಾ.ಕೇಶವ ಬಲಿರಾಮ್ ಹೆಡಗೇವಾರ್ ಹೊರಟಿದ್ದ ಸಂದರ್ಭ. ನಾಗಪುರದಿಂದ ರೈಲಿನಲ್ಲಿ ಹೊರಟಿದ್ದ ಅವರ ನಾಯಕತ್ವದ ತಂಡ ಮೊದಲ ದಿನ ಸಂಜೆ ವರ್ಧಾ ತಲುಪಿ, ಅಲ್ಲಿ ರಾತ್ರಿ ಉಳಿದಿತ್ತು. ಮರುದಿನ ಪ್ರಾತಃಕಾಲ ಅಲ್ಲಿನ ಶ್ರೀರಾಮ ಮಂದಿರದಲ್ಲಿ ಅವರೆಲ್ಲರ ಸನ್ಮಾನ ನಡೆದು, ನಂತರ ಸ್ಟೇಶನ್‌ವರೆಗೆ ಮೆರವಣಿಗೆಯಲ್ಲಿ ತಂಡ ಹೊರಟಿತು. ದಾರಿಯುದ್ದಕ್ಕೂ ಅಲ್ಲಲ್ಲಿ ಹೂ ಹಾರಗಳಿಂದ ಅವರನ್ನು ಸತ್ಕರಿಸಿ, ಆರತಿ ಸಹ ಸಲ್ಲಿಸಲಾಗುತ್ತಿತ್ತು.

ವರ್ಧಾ ಸ್ಟೇಶನ್‌ನಲ್ಲಿ ಅವರನ್ನು ಪ್ರೀತಿಯಿಂದ ಬೀಳ್ಕೊಡುವ ಸಲುವಾಗಿ ಶ್ರೀ ನಾರಾಯಣರಾವ್ ದೇಶಪಾಂಡೆ ಮತ್ತು ಶ್ರೀ ತ್ರ್ಯಂಬಕರಾವ್ ದೇಶಪಾಂಡೆ ಎಂಬ ಇಬ್ಬರು ಅವರ ಸ್ನೇಹಿತರು ಆರ್ವಿಯಿಂದ ಬಂದಿದ್ದರು. ಡಾಕ್ಟರ್‌ಜಿಯವರು ತಾನು ಗಾಡಿ ಹತ್ತಿದಂತೆಯೇ ಅಲ್ಲೆ ಸಮೀಪದಲ್ಲಿ ನಿಂತಿದ್ದ ಅವರಿಬ್ಬರ ಬಳಿ ಸಹಜವಾಗಿ 'ಬನ್ನಿ, ಹೊರಡೋಣ' ಎಂದರು.


ಪ್ರಾಯಶಃ ಡಾಕ್ಟರ್‌ಜಿ ಹಾಗೆ ಹೇಳಿದುದು ಕೇವಲ ಔಪಚಾರಿಕವಾಗಿ ಇರಬಹುದು. ಆದರೆ ಅವರಿಬ್ಬರು ಕೂಡಲೇ ತಾವೂ ರೈಲು ಹತ್ತಿದರು. ಇಬ್ಬರೂ ಸಹ ಗೃಹಸ್ಥರು, ಮಡದಿ ಮಕ್ಕಳಿದ್ದವರು, ಪರಿವಾರದ ನಿರ್ವಹಣೆಯ ಹೊಣೆಯಿದ್ದವರು, ಸತ್ಯಾಗ್ರಹದಲ್ಲಿ ಪಾಲ್ಗೊಂಡಲ್ಲಿ ಮುಂದೆ ಸೆರೆಮನೆ ವಾಸದ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂಬುದನ್ನು ತಿಳಿದಿದ್ದವರು, ಅದೇ ರೀತಿಯಲ್ಲಿ ಆಯಿತು ಸಹ. ಆದರೆ ತಮ್ಮ ನಾಯಕನ ಒಂದು ಮಾತು ಅಷ್ಟೇ – ಅದರ ಪಾಲನೆಗಾಗಿ ಯಾವುದೇ ಬೆಲೆ ತೆರಲು ಸಹ ಸಿದ್ಧರಾಗಿದ್ದು, ಅದರಲ್ಲೇ ಬದುಕಿನ ಸಾರ್ಥಕತೆ ಕಾಣುವಂತಹ ಹಲವಾರು ಮಿತ್ರರು ಮತ್ತು ಅನುಯಾಯಿಗಳನ್ನು ರೂಪಿಸಿದ್ದುದು ಡಾಕ್ಟರಜಿಯವರದೇ ವಿಶೇಷತೆ.

## ಪುಸ್ತಕ ಪರಿಚಯ

### ದೇಶೋನ್ನತಿಯ ಸರ್ವಾಂಗೀಣ ಹರಿಕಾರರು

**ಲೇಖಕ:** ಕಾ. ಶ್ರೀ. ನಾಗರಾಜ
**ಬೆಲೆ:** ರೂ. 120

ಡಾ. ಕೇಶವ ಬಲಿರಾಮ ಹೆಡಗೇವಾರ್ ಮತ್ತು ಶ್ರೀ ಗುರೂಜಿಯವರು ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡಲು ಅತಿಶ್ರೇಷ್ಠ ಅರ್ಹತೆ ಇರುವ ನಾಯಕರುಗಳು. ಸ್ಥಾನ, ಅಧಿಕಾರ ಅಥವಾ ವೈಯಕ್ತಿಕ ಕೀರ್ತಿಯ ಬಂಧಗಳನ್ನು ಮೀರಿದ ಅವರ ಏಕಮನದ ನಿಷ್ಠೆ ಸಮಗ್ರ ರಾಷ್ಟ್ರಕ್ಕೆ ಮುಡಿಪಾಗಿತ್ತು. ಅವರ ವಿಚಾರಗಳು ಅತಿಸ್ಪಷ್ಟ. ಇಂದಿನ ಪೀಳಿಗೆ ಅವರ ವಿಚಾರಧನವನ್ನು ಅವರದೇ ಮಾತುಗಳಲ್ಲಿ ಕೇಳುವುದು ಅತ್ಯಂತ ಸೂಕ್ತವಾದದ್ದು.




ಡಾ. ಹೆಡಗೇವಾರ್ ಮತ್ತು ಶ್ರೀ ಗುರೂಜಿಯವರ ವಿಚಾರಗಳಿಂದ ನಮ್ಮ ರಾಷ್ಟ್ರದ ಪರಮೋದ್ದೇಶದ ಸಾಧನೆಯ ಮಾರ್ಗದಲ್ಲಿ ವಿವೇಚನಾವಂತ ವಾಚಕರು ಅನಂತವಾದ ಭರವಸೆ, ಮಾರ್ಗದರ್ಶನ ಮತ್ತು ಸ್ಫೂರ್ತಿಯ ಕಿರಣಗಳನ್ನು ಪಡೆದುಕೊಳ್ಳಲೆಂಬ ಆಶಯವನ್ನು ಈ ಹೊತ್ತಿಗೆ ಹೊಂದಿದೆ.

ಈ ಪುಸ್ತಕದಲ್ಲಿ ಇಬ್ಬರು ಮಹಾನ್ ವ್ಯಕ್ತಿತ್ವಗಳ ಆಳ ವಿಶಾಲಗಳ ತತ್ತ್ವಬೋಧನೆಯ ಬದಲಿಗೆ, ಅವರು ಸಮಯೋಚಿತವಾಗಿ ಸಾಧ್ಯವಾದಷ್ಟು ಹ್ರಸ್ವವಾಗಿ ನೀಡಿರುವ ವಿಚಾರಗುಚ್ಛಗಳು, ಅವರ ಚುಟುಕು ಮಾರ್ಗದರ್ಶನ, ಸಾವಧಾನತೆಗಳು ಸ್ವಂತ ಅಭಿಪ್ರಾಯಗಳು ಹಾಗೂ ಸರಿಮಾರ್ಗದಲ್ಲೇ ಹೆಜ್ಜೆ ಇಡಲು ಪ್ರೇರೇಪಿಸುವ ಅಂಶಗಳನ್ನು ಈ ಪುಸ್ತಕ ನೀಡುತ್ತದೆ. ಡಾ. ಹೆಡಗೇವಾರ್ ಮತ್ತು ಶ್ರೀ ಗುರೂಜಿ ಅವರು ದೈಹಿಕವಾಗಿ ಅಗಲಿ ಹಲವು ದಶಕಗಳೇ ಕಳೆದರೂ ಅವರ ವಿಚಾರಗಳು ಇಂದಿಗೂ ಸರ್ವಾಂಗೀಣ ದೇಶೋನ್ನತಿಯ ಮೂಲತತ್ವಗಳು ಎನ್ನುವುದನ್ನು ಪುಸ್ತಕ ಸಾರುತ್ತದೆ.

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ್ ಉದ್ಯಾವರ, ಪಂಚಮಿ ಬಾಕಿಲಪದವು, ದೀಕ್ಷಿತ್ ನಾಯರ್ ಮಂಡ್ಯ

# ಯುವಜನತೆಗೆ ಪ್ರೇರಣೆ ಪದ್ಮ ಪುರಸ್ಕೃತರ ಜೀವನೋತ್ಸಾಹದ ಚಿಲುಮೆ

**2024ನೇ ಸಾಲಿನ ಪದ್ಮಪ್ರಶಸ್ತಿ ಘೋಷಣೆಯಾಗಿದ್ದು 132 ಮಂದಿ ಪ್ರಶಸ್ತಿ ಪುರಸ್ಕೃತರಲ್ಲಿ 9 ಮಂದಿ ಕನ್ನಡಿಗರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅವರ ಪ್ರೇರಣಾದಾಯಿ ಜೀವನದ ಕಿರುಪರಿಚಯ.**

### ದೀನರ ಭರವಸೆ ಡಾ. ಸೀತಾರಾಮ್



ಪದ್ಮಭೂಷಣ ಡಾ. ಸೀತಾರಾಮ್ ಜಿಂದಾಲ್ ಅವರು ಜಿಂದಾಲ್ ಅಲ್ಯೂಮಿನಿಯಂ ಲಿಮಿಟೆಡ್ (JAL) ನ ಸಂಸ್ಥಾಪಕ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು. ಕಳೆದ ಹಲವು ದಶಕಗಳಿಂದ ಸತತವಾಗಿ ಉದ್ಯಮದ ಮುನ್ನಡೆಯನ್ನು ಕಾಯ್ದುಕೊಂಡ ಮಾದರಿ ಸಂಸ್ಥೆ. ಬಡವರು ಮತ್ತು ಸಂಕಷ್ಟದಲ್ಲಿರುವ ದೀನದಲಿತರಿಗೆ ಭರವಸೆಯನ್ನು ತರುವುದು ಸಮಾಜಕ್ಕೆ ಮರಳಿ ನೀಡುವ ಅತ್ಯಂತ ಪ್ರಾಯೋಗಿಕ ಮತ್ತು ಅರ್ಥಪೂರ್ಣ ಮಾರ್ಗವೆಂದು ಜಿಂದಾಲ್ ನಂಬುತ್ತಾರೆ. ಈ ನಿಟ್ಟಿನಲ್ಲಿ ಈ ಹಿಂದೆ ಎಸ್ ಜೆ ಜಿಂದಾಲ್ ಟ್ರಸ್ಟ್ ಎಂದು ಕರೆಯಲ್ಪಡುವ ಸೀತಾರಾಮ್ ಜಿಂದಾಲ್ ಫೌಂಡೇಶನ್ ಅನ್ನು 1969ರಲ್ಲಿ ವಿವಿಧ ಕ್ಷೇತ್ರಗಳಲ್ಲಿ ಬಡವರು ಮತ್ತು ದೀನದಲಿತರ ಸೇವೆ ಮಾಡುವ ಉದ್ದೇಶದಿಂದ ದತ್ತಿ ಸಂಸ್ಥೆಯಾಗಿ ಸ್ಥಾಪಿಸಲಾಯಿತು. ಅದರ ಮೂಲಕ ಸಮಾಜದ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಯ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ.

### ಆತ್ಮಸ್ಥೈರ್ಯಕ್ಕೆ ಮೇಲ್ಪಂಕ್ತಿ ಪ್ರೇಮಾ



ತಮ್ಮ 8ನೇ ವಯಸ್ಸಿನಲ್ಲಿ ಬೆಂಕಿ ಅವಘಡದಿಂದಾಗಿ ತಮ್ಮ ದೇಹದ 50% ಭಾಗಕ್ಕೆ ವಿಪರೀತ ಸುಟ್ಟ ಗಾಯಗಳಾಗಿ ತೊಂದರೆ ಅನುಭವಿಸಿದವರು ಪ್ರೇಮಾ ಧನರಾಜ್. ಬದುಕುವುದೇ ಅನುಮಾನ ಎಂಬುವಂತಿದ್ದ ಪ್ರೇಮಾ ಎಲ್ಲವನ್ನೂ ಮೆಟ್ಟಿ ನಿಂತರು. ಆತ್ಮಸ್ಥೈರ್ಯದಿಂದ ಬದುಕನ್ನು ಸಾಗಿಸಿ ಮುಂದೆ ವೈದ್ಯೆಯಾಗಿ ಸುಟ್ಟ ಗಾಯಗಳಿಗೆ ತುತ್ತಾದವರಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿ ಅವರಿಗೆ ಮರು ಜೀವ ನೀಡಲು ಮುಂದಾದರು. ಸದ್ಯಕ್ಕೆ ದೇಶದ ಪ್ರಸಿದ್ಧ ಪ್ಲಾಸ್ಟಿಕ್ ಸರ್ಜನ್ ಆಗಿ ಗುರುತಿಸಿಕೊಂಡಿರುವ ಪ್ರೇಮಾ ಇಲ್ಲಿಯವರೆಗೂ 25,000ಕ್ಕೂ ಹೆಚ್ಚು ಜನರಿಗೆ ಉಚಿತವಾಗಿ ಸರ್ಜರಿ ಮಾಡುವ ಮೂಲಕ ಪ್ರಾಮಾಣಿಕ ಸೇವೆ ಮಾಡಿದ್ದಾರೆ. ಸಮಾಜ ಸೇವಾ ಕ್ಷೇತ್ರದಲ್ಲಿ ಮನ್ನಣೆಗಳಿಸಿದ್ದಾರೆ. ಅವರು ಸ್ಥಾಪಿಸಿರುವ 'ಅಗ್ನಿ ರಕ್ಷಾ' ಎನ್‌ಜಿಒ ಸಂಸ್ಥೆ ಎಷ್ಟೋ ಜನರಿಗೆ ಆಶಾ ಜ್ಯೋತಿಯಾಗಿದೆ.

### ಕೃಷಿಯೇ 'ಸತ್ಯ' ಎಂದು ನಂಬಿದ ಸಾಧಕ



ಸತ್ಯ ನಾರಾಯಣ ಎಂಬ ಕೃಷಿ ತಪಸ್ವಿ ಕಾಸರಗೋಡಿನ ನಾಟೆಕಲ್ಲು ಸಮೀಪದ ಬೆಳೇರಿಯಲ್ಲಿ ಭತ್ತದ ತಳಿಗಳ ಸಂಶೋಧನೆಯಲ್ಲಿ ತೊಡಗಿದ್ದಾರೆ. ಕೃಷಿಭೂಮಿ ಇಲ್ಲದೆ ಇದ್ದರೂ 25 ಸೆಂಟ್ ಗುಡ್ಡ ಪ್ರದೇಶದಲ್ಲಿ ಇವರು ಅಭಿವೃದ್ಧಿಪಡಿಸಿದ 650ಕ್ಕೂ ಹೆಚ್ಚಿನ ಭತ್ತದ ತಳಿಗಳ ಬೀಜಗಳು ದೇಶದ ಹಲವಾರು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಪ್ರಯೋಗವಾಗಿವೆ. ಸತ್ಯ ನಾರಾಯಣ ಅವರ 'ರಾಜಕಯಮೆ' ತಳಿ ಕರ್ನಾಟಕ, ತಮಿಳುನಾಡು ಮತ್ತು ಕೇರಳದಲ್ಲಿನ ರೈತರಿಗೆ ಅದ್ಭುತ ಇಳುವರಿ ನೀಡಿ ಪ್ರಸಿದ್ಧಿ ಪಡೆದಿದೆ. ಕಳೆದ ಒಂದೂವರೆ ದಶಕಗಳಿಂದ ಸಂಶೋಧನೆಯಲ್ಲಿ ತೊಡಗಿರುವ ಅವರ 'ಪಾಲಿಬ್ಯಾಗ್' ಮಾದರಿ ಎಲ್ಲರ ಗಮನ ಸೆಳೆದಿದೆ. ಭತ್ತ ಮಾತ್ರವಲ್ಲದೆ ಅಡಿಕೆ, ಜಾಯಿಕಾಯಿ ಮತ್ತು ಕರಿಮೆಣಸು ತಳಿಗಳನ್ನು ಕೂಡ ಕಾಣಿಕೆಯಾಗಿ ನೀಡಿದ್ದಾರೆ. ಅಷ್ಟೇ ಅಲ್ಲದೆ ಅಭಿವೃದ್ಧಿಪಡಿಸಿದ ತಳಿಗಳ ಬೀಜಗಳನ್ನು ಉಚಿತವಾಗಿ ಹಂಚಿದ್ದಾರೆ.

### ಜೇನು ಕುರುಬ ಸಮುದಾಯದ ಸಾಕ್ಷಿಪ್ರಜ್ಞೆ ಸೋಮಣ್ಣ



ಸಾಮಾನ್ಯರಲ್ಲಿ ಸಾಮಾನ್ಯರಂತೆ ಬದುಕುತ್ತಿರುವ ಹಳ್ಳಿಗಾಡಿನ ಸೋಮಣ್ಣ ಕಳೆದ ನಾಲ್ಕು ದಶಕಗಳಿಂದ ಬುಡಕಟ್ಟು ಸಮುದಾಯಕ್ಕೆ ನ್ಯಾಯ ಒದಗಿಸಲು ಅವಿರತವಾಗಿ ಹೋರಾಡುತ್ತಿದ್ದಾರೆ. ಮೂಲ ನಿವಾಸಿಗಳು ತಮ್ಮ ಮನೆಗಳನ್ನು ಕಳೆದುಕೊಂಡಾಗ ಬುಡಕಟ್ಟುಗಳ ಹಾಡಿಗಳಿಗೆ ಕಾಲ್ನಡಿಗೆಯಲ್ಲಿಯೇ ತೆರಳಿ ಅವರ ಕಷ್ಟಕ್ಕೆ ಸ್ಪಂದಿಸಿ ಹೆಗಲಾದವರು ಸೋಮಣ್ಣ. ತಮ್ಮ ಸಂಘಟಿತ ಶಕ್ತಿಯಿಂದಾಗಿ ಆದಿವಾಸಿಗಳಿಗೆ 6000 ಎಕರೆ ಕೃಷಿ ಭೂಮಿಯನ್ನು ದೊರಕಿಸಿಕೊಟ್ಟ ಹೋರಾಟಗಾರ. ಬಂಡವಾಳ ಶಾಹಿಗಳ ವಿರುದ್ಧವೂ ಸಾಕಷ್ಟು ಬಾರಿ ಹೋರಾಟ ನಡೆಸಿರುವ ಇವರು ಬುಡಕಟ್ಟು ಜನರಿಗೆ ನ್ಯಾಯ ಕಲ್ಪಿಸುವ ಸಲುವಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟಿದ್ದಾರೆ. 66 ವರ್ಷದ ಸೋಮಣ್ಣ ಅವರಲ್ಲಿ ಈಗಲೂ ಇರುವ ಹೋರಾಟದ ಕಿಚ್ಚು ಇಂದಿನ ಪೀಳಿಗೆಗೆ ಆದರ್ಶವಾಗಬೇಕಿದೆ.

### ಕನ್ನಡಿಗರ ಮನದ (ಮನೋ) ವೈದ್ಯ



ಚಂದ್ರಶೇಖರ್ ಚನ್ನಪಟ್ಟಣ ರಾಜಣ್ಣಾಚಾರ್ ಅವರು ವೈದ್ಯ ಲೋಕದಲ್ಲಿ ಡಾ. ಸಿ ಆರ್ ಸಿ ಎಂದೇ ಚಿರಪರಿಚಿತರು. ಅಂತಾರಾಷ್ಟ್ರೀಯ ಖ್ಯಾತಿಯ ಮನೋರೋಗ ತಜ್ಞರಾದ ಸಿ ಆರ್ ಸಿ ದಶಕಗಳ ಕಾಲ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಯಲ್ಲಿ ವೈದ್ಯರಾಗಿ ಅಪಾರ ಸೇವೆ ಸಲ್ಲಿಸಿದವರು. ಮಾನಸಿಕ ಆರೋಗ್ಯ ಮತ್ತು ಲೈಂಗಿಕ ವಿಜ್ಞಾನ ವಿಷಯಗಳಲ್ಲಿ ಸಾಕಷ್ಟು ಅಧ್ಯಯನ ನಡೆಸಿ ಕರ್ನಾಟಕಕ್ಕೆ ಮಾತ್ರವಲ್ಲ ಭಾರತಕ್ಕೆ ಹೆಸರು ತಂದವರು. ತಮ್ಮ 'ಸಮಾಧಾನ' ಕ್ಲಿನಿಕ್ ಮೂಲಕ ಲಕ್ಷಾಂತರ ಮನೋರೋಗಿಗಳನ್ನು ಸಿ ಆರ್ ಸಿ ಗುಣಪಡಿಸಿದ್ದಾರೆ. ವೈದ್ಯರಾಗಿ ಮಾತ್ರವಲ್ಲದೆ ವೈದ್ಯ ಸಾಹಿತಿಯಾಗಿಯೂ ಹೆಸರುವಾಸಿಯಾಗಿರುವ ಸಿ ಆರ್ ಸಿ ಮನೋರೋಗಕ್ಕೆ ಸಂಬಂಧಿಸಿದಂತೆ ನೂರಾರು ಪುಸ್ತಕಗಳನ್ನು ಬರೆದಿದ್ದಾರೆ.

### ಕ್ರೀಡಾ ಕ್ಷೇತ್ರದ ತಾರೆ ರೋಹನ್ ಬೋಪಣ್ಣ



ರೋಹನ್ ಬೋಪಣ್ಣ ಭಾರತದ ಹಿರಿಯ ಟೆನಿಸ್ ಆಟಗಾರರು. ಇತ್ತೀಚೆಗಷ್ಟೆ ಆಸ್ಟ್ರೇಲಿಯನ್ ಓಪನ್ 2024 ಪ್ರಶಸ್ತಿಯನ್ನು ತಮ್ಮದಾಗಿಸಿಕೊಳ್ಳುವ ಮೂಲಕ ಡಬಲ್ಸ್‌ನಲ್ಲಿ ವಿಶ್ವದ ನಂ-1 ಟೆನ್ನಿಸ್ ಆಟಗಾರ ಎನಿಸಿಕೊಂಡಿದ್ದಾರೆ. 43 ವರ್ಷದ ಕನ್ನಡಿಗ ಬೋಪಣ್ಣ ಮೂಲತಃ ಬೆಂಗಳೂರಿನವರು. ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಯನ್ನು ಗೆದ್ದ ನಾಲ್ಕನೇ ಭಾರತೀಯ ಆಟಗಾರ. 2023ರ ಹ್ಯಾಂಗ್‌ಝೌನಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ರುತುಜಾ ಭೋಸ್ಲೆ ಅವರೊಂದಿಗೆ ಮಿಶ್ರ ಡಬಲ್ಸ್ ಚಿನ್ನದ ಪದಕವನ್ನು ಗೆಲ್ಲುವ ಮೂಲಕ ಕ್ರೀಡಾ ಪ್ರೇಮಿಗಳಿಗಾಗಿ ಇತಿಹಾಸ ಸೃಷ್ಟಿಸಿದ್ದಾರೆ.

### ಕಲೆಗೆ ಜೀವ ತುಂಬುವ 'ಅನುಪಮಾ' ಸಾಧಕಿ



ಬೊಂಬೆಯಾಟಕ್ಕೆ ಆಧುನಿಕ ಸ್ಪರ್ಶವಷ್ಟೇ ಅಲ್ಲದೆ ಭಾವಸ್ಪರ್ಶವನ್ನೂ ನೀಡಿದವರು ಅನುಪಮಾ ಹೊಸಕೆರೆ. ಅವರು ಈ ನೆಲದ ಜಾನಪದ ಕಂಪನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪಸರಿಸಿದವರು. ಕಳೆದ ಮೂರು ದಶಕಗಳಿಂದ ಸೂತ್ರದ ಬೊಂಬೆಯಾಟದಲ್ಲಿ ವಿಭಿನ್ನ ಪ್ರಯೋಗಗಳನ್ನು ಮಾಡುವ ಮೂಲಕ ಸಾಧಕಿ ಎನಿಸಿಕೊಂಡಿದ್ದಾರೆ. ನಶಿಸಿ ಹೋಗುತ್ತಿರುವ ಬೊಂಬೆ ಆಟದ ಉತ್ಸವವನ್ನು ಅನುಪಮಾ ಪ್ರತಿ ವರ್ಷವೂ ಆಯೋಜಿಸುತ್ತಾ ಬರುತ್ತಿದ್ದಾರೆ. ಅಪರೂಪದ ಕಲೆಯನ್ನು ಜೀವಂತವಾಗಿರಿಸುವ ಮೂಲಕ ಇಂದಿನ ಪೀಳಿಗೆಗೆ ಕಲೆಯ ಪರಿಚಯ ಮಾಡಿಕೊಡುತ್ತಿರುವ ಅನುಪಮಾ ಹೊಸಕೆರೆ ಅವರ ಕಲಾಸೇವೆ ಶ್ಲಾಘನೀಯ.

### ಗಾಲಿ ಕುರ್ಚಿಯ ಅಸಾಧಾರಣ ಸಾಧಕ



ದೈಹಿಕವಾಗಿ ನ್ಯೂನತೆಗಳಿದ್ದರೂ ಆತ್ಮಬಲದ ಮೂಲಕ ಅವುಗಳನ್ನು ಹೋಗಲಾಡಿಸಿ ದೇಶದ ಅತ್ಯುನ್ನತ ಶಿಕ್ಷಣ ತಜ್ಞರಾಗಿ ನಿಂತವರು ಎಂ.ಕೆ ಶ್ರೀಧರ್ ಅವರು. ರಾಷ್ಟ್ರೀಯ ಶಿಕ್ಷಣ ನೀತಿ – 2020ರ ಕರಡು ಸಮಿತಿಯ ಸದಸ್ಯರಾಗಿದ್ದ ಇವರು ಕರ್ನಾಟಕ ಜ್ಞಾನ ಆಯೋಗ ಮತ್ತು ಕರ್ನಾಟಕ ರಾಜ್ಯ ಸಲಹಾ ಮಂಡಳಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಎಂ.ಕೆ.ಶ್ರೀಧರ್ ಅವರು ಭೌತಶಾಸ್ತ್ರ ಮತ್ತು ವಿಜ್ಞಾನ ಬರಹಗಳ ಮೂಲಕವೂ ಹೆಚ್ಚು ಹೆಸರುವಾಸಿಯಾಗಿದ್ದಾರೆ. ಬೆಂಗಳೂರು ಮೂಲದ ಕನ್ನಡಿಗ ಶ್ರೀಧರ್ ಮಾಕಂ ಕೃಷ್ಣಮೂರ್ತಿ ತಮ್ಮಲ್ಲಿನ ಕೊರತೆಗಳಿಗೆ ಕುಗ್ಗದೆ ಸಮಾಜಕ್ಕೆ ಸ್ಫೂರ್ತಿಯಾಗಿದ್ದಾರೆ.

### ಸೋತು ಗೆದ್ದ ಸಾಧಕಿ ಶಶಿ ಸೋನಿ



ಭಾರತದ ಮಹಿಳಾ ಉದ್ಯಮಿಗಳಲ್ಲಿ ಒಬ್ಬರಾದ ಶಶಿ ಸೋನಿ ಅವರು ಐದು ದಶಕಗಳ ಹಿಂದೆ 10,000 ರೂಪಾಯಿ ಬಂಡವಾಳ ಹೂಡಿಕೆ ಮಾಡುವ ಮೂಲಕ ಡೀಪ್ ಟ್ರಾನ್ಸ್‌ಪೋರ್ಟ್ ಅನ್ನು ಶುರು ಮಾಡಿದರು. ಮುಂಬೈನಲ್ಲಿ ಚಿತ್ರಮಂದಿರವೊಂದನ್ನೂ ತೆರೆದರು. ಆದರೆ ಯಾವುದೂ ಶಶಿ ಸೋನಿ ಅವರ ಕೈಹಿಡಿಯಲಿಲ್ಲ. ನಿರಂತರ ಸೋಲುಗಳು ಎದುರಾದರೂ ಶಶಿ ಸೋನಿ ಸುಮ್ಮನಾಗಲಿಲ್ಲ. 2005ರಲ್ಲಿ ಶಶಿ ಸೋನಿ ಇಝ್ಮೋ ಲಿಮಿಟೆಡ್ ತೆರೆದರು. ಅವರ ಕಂಪನಿ ಈಗ ವಿಶ್ವದ ಅತಿ ದೊಡ್ಡ ಕಂಪನಿಗಳ ಸಾಲಿನಲ್ಲಿ ಒಂದೆನಿಸಿಕೊಂಡಿದೆ. ಸಾವಿರಾರು ಜನರಿಗೆ ಉದ್ಯೋಗ ಒದಗಿಸಿದೆ. ಮಹಿಳೆಯರಿಗೆ ಶಿಕ್ಷಣ, ಪಿಂಚಣಿ ಮತ್ತು ಅಂಗವಿಕಲರಿಗಾಗಿ ನಿಧಿಯನ್ನು ಸಂಗ್ರಹಿಸಿ ಸಾಮಾಜಿಕ ಸೇವೆಯಲ್ಲಿಯೂ ತೊಡಗಿದೆ.

# ಸಾಲುದ್ದದ ಸುದ್ದಿಗಳು

### 'ವಿಕಸಿತ ಭಾರತ' ಬಜೆಟ್ ಮಂಡನೆ

ಕೇಂದ್ರ ಸರ್ಕಾರ ಮಧ್ಯಂತರ ಬಜೆಟ್ ಮಂಡನೆ ಮಾಡಿದ್ದು, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ತಮ್ಮ 6ನೇ ಬಜೆಟ್ ಮಂಡಿಸಿ ಮೊರಾರ್ಜಿ ದೇಸಾಯಿ (10 ಬಾರಿ) ನಂತರ ಅತಿಹೆಚ್ಚು ಬಜೆಟ್ ಮಂಡಿಸಿದ ವಿತ್ತ ಸಚಿವರು ಎಂಬ ದಾಖಲೆ ಬರೆದಿದ್ದಾರೆ. ಈ ಬಾರಿಯ ಬಜೆಟ್‌ನ ಒಟ್ಟು ಗಾತ್ರ ₹47.66 ಲಕ್ಷ ಕೋಟಿಯಾಗಿದೆ. ಮುಖ್ಯವಾಗಿ ರಕ್ಷಣಾ ಕ್ಷೇತ್ರಕ್ಕೆ ₹6.21 ಲಕ್ಷ ಕೋಟಿ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗೆ ₹2.78 ಲಕ್ಷ ಕೋಟಿ, ರೈಲ್ವೆಗಾಗಿ ₹2.55 ಲಕ್ಷ ಕೋಟಿ, ಯುವಕರ ಸಂಶೋಧನಾ ಕ್ಷೇತ್ರಕ್ಕೆ 1 ಲಕ್ಷ ಕೋಟಿ, 1 ಕೋಟಿ ಮನೆಗಳಿಗೆ ಸೌರ ವಿದ್ಯುತ್ ಒದಗಿಸುವ ಸೂರ್ಯೋದಯ ಯೋಜನೆ ಸೇರಿ ಹಲವು ಕ್ಷೇತ್ರಗಳಿಗೆ ಮಹತ್ವ ನೀಡಲಾಗಿದೆ.

### 29ರೂ.ಗೆ ಭಾರತ್ ಬ್ರ್ಯಾಂಡಿನ ಅಕ್ಕಿ!

ಕೇಂದ್ರ ಸರ್ಕಾರ ಜನಸಾಮಾನ್ಯರಿಗೆ ಪ್ರತಿ ಕೆ.ಜಿ.ಗೆ 29ರೂ.ನಂತೆ ಅಕ್ಕಿ ಮಾರಾಟ ಮಾಡಲು ನಿರ್ಧರಿಸಿದೆ. ಅಲ್ಲದೆ ಸಗಟು ಖರೀದಿದಾರರು ತಮ್ಮ ಬಳಿ ಹೊಂದಿರುವ ಅಕ್ಕಿ ಸಂಗ್ರಹದ ಪ್ರಮಾಣವನ್ನೂ ಬಹಿರಂಗಪಡಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ. ನ್ಯಾಷನಲ್ ಅಗ್ರಿಕಲ್ಚರಲ್ ಕೋ-ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಆಫ್ ಇಂಡಿಯಾ (ನಾಫೆಡ್), ನ್ಯಾಷನಲ್ ಕೋಅಪರೇಟಿವ್ ಕನ್ಸ್ಯೂಮರ್ಸ್ ಫೆಡರೇಷನ್ ಆಫ್ ಇಂಡಿಯಾ (ಎನ್‌ಸಿಸಿಎಫ್), ಕೇಂದ್ರೀಯ ಭಂಡಾರಗಳು ಮತ್ತು ಇ-ಕಾಮರ್ಸ್‌ಗಳ ತಾಣಗಳ ಮೂಲಕ ಅಕ್ಕಿ ಮಾರಾಟ ಮಾಡಲಾಗುವುದು. ಈ ಯೋಜನೆಗಾಗಿ ಮೊದಲ ಹಂತದಲ್ಲಿ 5 ಲಕ್ಷ ಟನ್ ಅಕ್ಕಿ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

### ಭಾರತದ ಆಟಿಕೆಗಳಿಗೆ ಜಾಗತಿಕ ಬೇಡಿಕೆ

ಜರ್ಮನಿಯ ನ್ಯೂರೆಂಬರ್ಗ್‌ನಲ್ಲಿ ನಡೆದ ಐದು ದಿನಗಳ ಅಂತರರಾಷ್ಟ್ರೀಯ ಆಟಿಕೆ ಮೇಳದಲ್ಲಿ 65ಕ್ಕೂ ಹೆಚ್ಚು ದೇಶಗಳಿಂದ 2,000ಕ್ಕೂ ಹೆಚ್ಚು ಪ್ರದರ್ಶಕರು ವಿಶ್ವದ ಅತಿದೊಡ್ಡ ಆಟಿಕೆ ಮೇಳಗಳಲ್ಲಿ ಭಾಗವಹಿಸಿದರು. ಈ ಮೇಳದಲ್ಲಿ ಭಾರತೀಯ ಆಟಿಕೆ ತಯಾರಕರು ಭಾಗವಹಿಸಿ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಪ್ರದರ್ಶಿಸಿ ಕೋಟ್ಯಂತರ ಮೌಲ್ಯದ ದೊಡ್ಡ ಆರ್ಡರ್‌ಗಳು ದೊರೆತಿವೆ. ಯುಎಸ್, ಯುಕೆ, ದಕ್ಷಿಣ ಆಫ್ರಿಕಾ ಮತ್ತು ಜರ್ಮನಿಯಂತಹ ದೇಶಗಳ ಖರೀದಿದಾರರು ಭಾರತೀಯ ಉತ್ಪನ್ನಗಳಲ್ಲಿ ಆಸಕ್ತಿಯನ್ನು ತೋರಿಸಿದೆ. ದೇಶದ ಆಟಿಕೆ ರಫ್ತು 2014-15ರಲ್ಲಿ $96.17 ಮಿಲಿಯನ್‌ನಿಂದ 2022-23ರಲ್ಲಿ $325.72 ಮಿಲಿಯನ್‌ಗೆ ಜಿಗಿದಿದೆ.

### ಐವರು ಭಾರತೀಯರಿಗೆ 8 ಗ್ರ್ಯಾಮಿ ಪ್ರಶಸ್ತಿ

ಸಂಗೀತ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿ ಎನಿಸಿದ ಗ್ರ್ಯಾಮಿ ಪ್ರಶಸ್ತಿಯನ್ನು ಏಕಕಾಲದಲ್ಲಿ ಐವರು ಭಾರತೀಯರು ಪಡೆದಿದ್ದಾರೆ. 8 ಗ್ರ್ಯಾಮಿ ಪ್ರಶಸ್ತಿಗೆ ಭಾಜನರಾಗುವ ಮೂಲಕ ದಾಖಲೆ ಸೃಷ್ಟಿಸಿದ್ದಾರೆ. ಖ್ಯಾತ ಸಂಗೀತಗಾರರಾಗಿರುವ ಝಾಕೀರ್ ಹುಸೇನ್ (3 ಪ್ರಶಸ್ತಿ), ರಾಕೇಶ್ ಚೌರಾಸಿಯಾ (2 ಪ್ರಶಸ್ತಿ), ಶಂಕರ್ ಮಹದೇವನ್, ಗಣೇಶ್ ರಾಜಗೋಪಾಲನ್ ಹಾಗೂ ಸೆಲ್ವಗಣೇಶ್ ವಿನಾಯಕ ರಾಮ್ ಅವರಿಗೆ 'ಗ್ರ್ಯಾಮಿ' ಪ್ರಶಸ್ತಿ ಲಭಿಸಿದೆ.



पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th FEBRUARY 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-02-2024



# ಭಾರತೀಯ ಕಲೆಗಳ ಆದರ್ಶ ಸತ್ಯಂ ಶಿವಂ ಸುಂದರಂ: ಡಾ. ಮೋಹನ್ ಭಾಗವತ್

ಬೆಂಗಳೂರು: ಸಂಸ್ಕಾರ ಭಾರತಿ ವತಿಯಿಂದ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ಫೆ.1–4ರವರೆಗೆ ಅಖಿಲ ಭಾರತೀಯ ಕಲಾಸಾಧಕ ಸಂಗಮ ನಡೆಯಿತು. ಕಾರ್ಯಕ್ರಮದಲ್ಲಿ ರಾಷ್ಟ್ರಾದ್ಯಂತದ 2500ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದರು. ಕಾರ್ಯಕ್ರಮದ ಉದ್ಘಾಟನೆಯಲ್ಲಿ ಮೈಸೂರಿನ ಮಹಾರಾಜ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವಿಜಯನಗರ ರಾಜವಂಶಸ್ಥ ಕೃಷ್ಣದೇವರಾಯ, ಜಾನಪದ ಕಲಾವಿದೆ ಮಂಜಮ್ಮ ಜೋಗತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಎರಡನೇ ದಿನ ಸಾಮಾಜಿಕ ಸಾಮರಸ್ಯದಲ್ಲಿ ಕಲೆ ಮತ್ತು ಸಾಹಿತ್ಯದ ಪಾತ್ರದ ಕುರಿತು ವಿಚಾರಗೋಷ್ಠಿ ನಡೆಯಿತು. ಗೋಷ್ಠಿಯಲ್ಲಿ ಪದ್ಮಶ್ರೀ ಮಾಲಿನಿ ಅವಸ್ಥಿ, ಆರ್ ಎಸ್ ಎಸ್ ಪ್ರಚಾರಕ್ ಮತ್ತು ಸಾಮಾಜಿಕ ಸಮರಸತಾ ಸಂಯೋಜಕ ರವೀಂದ್ರ ಕೋರ್ಕೋರೆ, ಕಲಾವಿದ ಇಂದುಶೇಖರ್ ತತ್ಪುರುಷ್, ಅಸ್ಸಾಂನ ಜಾನಪದ ಕಲಾವಿದ ಅನಿಲ್ ಸೈಖಿಯಾ ಮತ್ತು ದೆಹಲಿ ವಿಶ್ವವಿದ್ಯಾನಿಲಯದ ಡಾ. ಅದಿತಿ ಪಾಸ್ವಾನ್ ಭಾಗವಹಿಸಿದರು.

ಫೆಬ್ರವರಿ 4, 2024ರಂದು ನಡೆದ ಅಖಿಲ ಭಾರತೀಯ ಕಲಾ ಸಾಧಕ ಸಂಗಮದ ಸಮಾರೋಪ ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಸಮಾರೋಪ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕಲೆ ಸಮಾಜಕ್ಕೆ ಸಂಸ್ಕಾರ, ಸಮರಸತೆ ನೀಡುತ್ತದೆ. ನಮ್ಮ ಚರಿತ್ರೆಯನ್ನು ಉದಾಹರಣೆ ನೀಡುವುದರ ಮೂಲಕ ಜಗತ್ತಿನ ಜನರಿಗೆ ಜೀವನ ಪಾಠವನ್ನು ಹೇಳಬೇಕಿದೆ. ಅಂತಹ ಮಾನವ ಸಮಾಜವನ್ನು ನಿರ್ಮಿಸುವುದಕ್ಕಾಗಿ ಕಲಾಜಗತ್ತಿನ ಕೆಲವು ಕಲಾವಿದರಿಂದ ಮಾತ್ರ ಸಾಧ್ಯವಿಲ್ಲ. ಇದು ಸಂಪೂರ್ಣ ಕಲಾ ಜಗತ್ತಿನ ಕೆಲಸವಾಗಿದೆ. ಭಾರತೀಯ ಕಲೆಗಳ ಆದರ್ಶ ಸತ್ಯಂ ಶಿವಂ ಸುಂದರಮ್ ಆಧಾರಿತವಾಗಿ ಜಗತ್ತಿನಲ್ಲಿ ಭಾರತೀಯ ಕಲಾ ವಿಮರ್ಶೆಯನ್ನು ಸ್ಥಾಪಿಸಬೇಕಾಗಿದೆ ಎಂದು ನುಡಿದರು.




ಮೂರನೆಯ ದಿನ ನಡೆದ ಭರತ ಮುನಿ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಭಾಗವಹಿಸಿದರು. ಖ್ಯಾತ ಜಾನಪದ ಕಲಾವಿದರಾದ ಗಣಪತ್ ಸಖಾರಾಮ್ ಮಸಗೆ ಮತ್ತು ಚಿತ್ರಕಾರರಾದ ವಿಜಯ ದಶರಥ್ ಆಚ್ರೇಕರ್ ಅವರಿಗೆ ಪ್ರಥಮ ವರ್ಷದ 'ಭರತ ಮುನಿ' ಪ್ರಶಸ್ತಿಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಪ್ರದಾನ ಮಾಡಿದರು. ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಭಾರತದ 'ಸ್ವ' ಅನ್ನು ಉಳಿಸುವ ಕೆಲಸವನ್ನು ಕಲೆ ಮತ್ತು ಕಲಾವಿದರು ಮಾಡುತ್ತಿದ್ದಾರೆ. ಹಾಗಾಗಿ ಕಲೆ ಮತ್ತು ಕಲಾವಿದರನ್ನು ಗೌರವಿಸಬೇಕು. ಭಾರತೀಯ 'ಸ್ವ' ಅನ್ನು ಪೋಷಿಸುವ ಕಲಾವಿದರ ಸಂಖ್ಯೆ ಹೆಚ್ಚಾಗಬೇಕು. ಜಗತ್ತಿನ ಎಲ್ಲಾ ಕಲೆಗಳು ಮನುಷ್ಯನನ್ನು ಮನುಷ್ಯನನ್ನಾಗಿಸುವ ದಿಕ್ಕಿನೆಡೆಗೆ ಸಾಗಬೇಕು. ಸಂಪೂರ್ಣ ಸಮಾಜವನ್ನು ಜೋಡಿಸುವುದಕ್ಕಾಗಿ ಇರುವ ಸತ್ಯವನ್ನು ದರ್ಶಿಸಲು, ಸಂವೇದನೆಯನ್ನು ಉಂಟುಮಾಡಲು ನಿತ್ಯ ನಿರಂತರವಾಗಿ ಸಹಕರಿಸುವ ವೃತ್ತಿಯು ಮುಕ್ತಿಯೆಡೆಗೆ ಕೊಂಡೊಯ್ಯುವ ಕಲೆಯಾಗಿದೆ.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಶ್ರೀ ರವಿಶಂಕರ್ ಗುರೂಜಿ ನಮ್ಮ ಸಂಸ್ಕೃತಿ ಪುರಾತನ ಮತ್ತು ನಿತ್ಯನೂತನವಾದದ್ದು. ಹಾಗಾಗಿ ಅದನ್ನು ಸನಾತನ ಎಂದು ಕರೆಯಲಾಗುತ್ತದೆ. ಆದರೆ ನಾವು ಸಂಘಟಿತರಾಗಿರಲಿಲ್ಲ. ಇಡೀ ದೇಶದಲ್ಲಿ ಪರ್ಯಟನೆಯನ್ನು ಮಾಡಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪೀಠಗಳನ್ನು ಸ್ಥಾಪಿಸಿ ದೇಶವನ್ನು ಸಂಘಟಿಸುವ ಪ್ರಯತ್ನವನ್ನು ಆದಿ ಶಂಕರಾಚಾರ್ಯರು ಮಾಡಿದ್ದರು. ಈಗ ಜನಮಾನಸವನ್ನು ಒಗ್ಗೂಡಿಸುವ ಕೆಲಸವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಮಾಡುತ್ತಿದೆ. ಸಂಘದ ಸ್ವಯಂಸೇವಕರು ದೇಶದ ಆಪತ್ಕಾಲದಲ್ಲಿ ತಕ್ಷಣ ನೆರವಿಗೆ ಬರುವ ಮೂಲಕ ಸಂಘ ಕಲಿಸಿದ ಸಂಸ್ಕಾರದ ಪ್ರತಿಬಿಂಬವಾಗಿದ್ದಾರೆ ಎಂದು ನುಡಿದರು.

ಆ ಕಲೆ ವಿಶ್ವವನ್ನು ಸುಸಂಸ್ಕೃತಗೊಳಿಸುತ್ತದೆ. ಆದ್ದರಿಂದ ಅಂತಹ ಕಲೆಯ ರಕ್ಷಣೆ ಮತ್ತು ಸಂಸ್ಕೃತಿಯ ರಕ್ಷಣೆ ಬೇರೆಯಲ್ಲ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಸಂಸ್ಕಾರ ಭಾರತಿಯ ಅಖಿಲ ಭಾರತಿಯ ಅಧ್ಯಕ್ಷ ವಾಸುದೇವ್ ಕಾಮತ್, ಉಪಾಧ್ಯಕ್ಷ ಮೈಸೂರು ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಅಶ್ವಿನ್ ದಳ್ವಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹ ಡಾ. ಮನಮೋಹನ್ ವೈದ್ಯ, ಅಯೋಧ್ಯೆ ರಾಮಮಂದಿರದ ರಾಮಲಲಾ ವಿಗ್ರಹವನ್ನು ರೂಪಿಸಿದ ಶಿಲ್ಪಿ ಅರುಣ್ ಯೋಗಿರಾಜ್, ಶಿಲ್ಪಿ ಜಿ.ಎಲ್.ಭಟ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ನಾಲ್ಕು ದಿನಗಳ ಕಾಲ ವಿವಿಧ ರಾಜ್ಯಗಳ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಸ್ತುತಿ, ಚಿತ್ರಕಲಾ ಹಾಗೂ ರಂಗೋಲಿ ಪ್ರದರ್ಶಿನಿ, ಸಾಮರಸ್ಯದ ವಿಷಯಾಧಾರಿತವಾಗಿ ನಡೆದ ಸಂಗಮದಲ್ಲಿ ಸಾಮರಸ್ಯದ ಅಗತ್ಯತೆಯನ್ನು ಸಾರುವ ರೂಪಕಗಳ ಪ್ರಸ್ತುತಿಗಳು, ಸಮರಸತಾ ಯಾತ್ರೆ ಜರುಗಿತು.

## ಜ್ಞಾನವಾಪಿಯಲ್ಲಿ ಪೂಜೆಗೆ ಕೋರ್ಟ್ ಅನುಮತಿ



ಕಾಶೀ ವಿಶ್ವನಾಥ ಮಂದಿರದ ಆವರಣದಲ್ಲಿರುವ ಜ್ಞಾನವಾಪಿ ಮಸೀದಿ ಕುರಿತ ವ್ಯಾಜ್ಯದಲ್ಲಿ ಹಿಂದುಗಳಿಗೆ ಮೊದಲ ಜಯ ಸಿಕ್ಕಿದೆ. ಜ್ಞಾನವಾಪಿ ದೇವಾಲಯದ ಮೇಲೆ ನಿರ್ಮಿಸಿದ ಮಸೀದಿ ಸಂಕೀರ್ಣದಲ್ಲಿ ಹಿಂದೂ ಮೂರ್ತಿಗಳಿಗೆ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು ಎಂದು ಕೋರಿದ್ದ ಅರ್ಜಿಯನ್ನು ಸುದೀರ್ಘ ವಿಚಾರಣೆ ನಡೆಸಿದ ವಾರಣಾಸಿ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಹಿಂದೂಗಳಿಗೆ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು ಎಂದು ಕೋರ್ಟ್ ಹೇಳಿದ್ದು ಮಸೀದಿ ಆವರಣದಲ್ಲಿ ಏಳು ದಿನದೊಳಗೆ ಹಿಂದೂಗಳಿಗೆ ಪೂಜೆ ಸಲ್ಲಿಸಲು ಸ್ಥಳೀಯ ಜಿಲ್ಲಾಡಳಿತ ಅವಕಾಶ ಮಾಡಿಕೊಡಬೇಕು ಎಂದು ಸೂಚಿಸಿದೆ. ವಿವಾದಿತ ಮಸೀದಿಯ ನೆಲಮಹಡಿಯಲ್ಲಿರುವ ಮೂರ್ತಿಗಳಿಗೆ ಪೂಜೆ ಸಲ್ಲಿಸಲು ಕೋರ್ಟ್ ಅವಕಾಶ ನೀಡಿದ ಬೆನ್ನಲ್ಲೆ ಜ್ಞಾನವಾಪಿಯಲ್ಲಿ ಪೂಜೆ ನಡೆದಿದೆ. ವಿವಾದಿತ ಸ್ಥಳದಲ್ಲಿರುವ ಮೂರ್ತಿಗಳಿಗೆ ಪೂಜೆ ಸಲ್ಲಿಸಲು ಕೇವಲ ಅರ್ಚಕರು ಮಾತ್ರ ತೆರಳಬೇಕು. ಸಾರ್ವಜನಿಕರ ದರ್ಶನ ಹಾಗೂ ಪೂಜೆಗೆ ಅವಕಾಶವಿಲ್ಲ ಎಂದೂ ಕೋರ್ಟ್ ತಿಳಿಸಿದೆ.

1993ರ ಬಳಿಕ ಜ್ಞಾನವಾಪಿ ವಿವಾದಿತ ಸ್ಥಳದ ತಳಮಹಡಿಯಲ್ಲಿರುವ ಹಿಂದೂ ಮೂರ್ತಿಗಳಿಗೆ ಪೂಜೆಗೆ ಅವಕಾಶ ನಿರಾಕರಿಸಲಾಗಿತ್ತು. ಆನಂತರ, ಜ್ಞಾನವಾಪಿಯಲ್ಲಿ ಕೇವಲ ಮುಸ್ಲಿಮರ ಪ್ರಾರ್ಥನೆ ಮಾತ್ರ ನಡೆಯುತ್ತಿತ್ತು. ಇತ್ತೀಚೆಗೆ ಮಸೀದಿಯ ಸರ್ವೆ ನಡೆಸಿದ್ದ ಭಾರತೀಯ ಪುರಾತತ್ವ ಇಲಾಖೆ ಕೋರ್ಟ್‌ಗೆ ಸಲ್ಲಿಸಿದ್ದ ವರದಿಯನ್ನು ಆಧರಿಸಿ ವಕೀಲರಾದ ಹರಿಶಂಕರ್ ಜೈನ್ ಹಾಗೂ ಶಶಿಶಂಕರ್ ಜೈನ್ ಮತ್ತೊಂದು ಅರ್ಜಿ ಸಲ್ಲಿಸಿದ್ದರು. ಹಿಂದೂ ಮಂದಿರ ಎನ್ನುವುದು ಪುರಾತತ್ವ ಇಲಾಖೆಯಲ್ಲಿ ಸಾಬೀತಾಗಿರುವ ಕಾರಣ ಹಿಂದೂ ಮೂರ್ತಿಗಳಿಗೆ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು ಎಂದು ಕೋರಿದ್ದರು. ಇದೀಗ ಈ ಅರ್ಜಿಯನ್ನು ಪುರಸ್ಕರಿಸಿ ಪೂಜೆಗೆ ಅವಕಾಶ ನೀಡಲಾಗಿದೆ. ಹಿಂದುಗಳ ಪೂಜೆಗೆ ನಿರ್ಬಂಧ ವಿಧಿಸಿದ್ದನ್ನು ಪ್ರಶ್ನಿಸಿ ಐವರು ಮಹಿಳೆಯರು ವಾರಣಾಸಿ ಕೋರ್ಟ್ ಮೆಟ್ಟಿಲೇರಿದ್ದರು. ಜ್ಞಾನವಾಪಿ ಮಸೀದಿ ವಿವಾದಕ್ಕೆ ಈ ಅರ್ಜಿ ಮರು ಜೀವ ನೀಡಿತ್ತು.

## ಹುಬ್ಬಳಿ: 12000 ಜನರಿಂದ ಸ್ವಚ್ಛತಾ ಕಾರ್ಯ

ಹುಬ್ಬಳ್ಳಿ ನಗರವು ಕರ್ನಾಟಕ, ಮಹಾರಾಷ್ಟ್ರ, ಗೋವಾ ಸೇರಿ ವಿವಿಧ ರಾಜ್ಯಗಳ 12000ಕ್ಕೂ ಹೆಚ್ಚು ಸ್ವಯಂಸೇವಕರಿಂದ ಮಹಾಸ್ವಚ್ಛತಾ ಅಭಿಯಾನಕ್ಕೆ ಸಾಕ್ಷಿಯಾಯಿತು. ಡಾ.ನಾನಾಸಾಹೇಬ ಧರ್ಮಾಧಿಕಾರಿ ಪ್ರತಿಷ್ಠಾನದಿಂದ ಹುಬ್ಬಳ್ಳಿಯ 164 ಪ್ರದೇಶಗಳಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು. ನಗರದ 11 ಪೊಲೀಸ್ ಠಾಣೆ, 16 ಮಾರುಕಟ್ಟೆ, 3 ಬಸ್ ನಿಲ್ದಾಣ, 12 ಸರ್ಕಾರಿ ಕಚೇರಿ ಸೇರಿ 164 ಪ್ರದೇಶಗಳಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು. ಒಟ್ಟು 2600 ಟನ್‌ಗೂ ಅಧಿಕ ಕಸ ಸಂಗ್ರಹಿಸಲಾಯಿತು.

## ಹಿಂದೂ ಧರ್ಮಕ್ಕೆ ಮರಳುವವರಿಗೆ ಟಿಟಿಡಿ ವ್ಯವಸ್ಥೆ



ಹಿಂದೂ ಧರ್ಮದಿಂದ ಇತರ ಧರ್ಮಗಳಿಗೆ ಹೋದವರನ್ನು ಮರಳಿ ಕರೆತರಲು ಪ್ರಯತ್ನ ನಡೆಸಬೇಕು, ಮತಾಂತರವನ್ನು ತಡೆಯಲು ತಿರುಮಲ ತಿರುಪತಿ ತಿರುಮಲ ದೇವಸ್ಥಾನ ಪ್ರಯತ್ನಿಸುತ್ತದೆ ಎಂದು ತಿರುಪತಿಯಲ್ಲಿ ನಡೆಯುತ್ತಿರುವ ಹಿಂದೂ ಧಾರ್ಮಿಕ ಸಮಾವೇಶದಲ್ಲಿ ತಿಳಿಸಿದೆ. ತಿರುಮಲ ಧಾರ್ಮಿಕ ಸದನದಲ್ಲಿ ನಡೆದ ಹಿಂದೂ ಧರ್ಮದ ವಿವಿಧ ಪಂಥಗಳ ನಡುವಿನ ಏಕತೆಯ ಸಮಾವೇಶದ ಎರಡನೇ ದಿನ ಸಮಾಲೋಚನಾ ಸಭೆಯಲ್ಲಿ ಈ ವಿಷಯ ಚರ್ಚೆಯಾಗಿ ಟಿಟಿಡಿ ಹಿಂದೂ ಧರ್ಮಕ್ಕೆ ಮರಳುವವರಿಗೆ ವ್ಯವಸ್ಥೆ ಕಲ್ಪಿಸಲು ಒಪ್ಪಿಕೊಂಡಿದೆ.

ಹಿಂದೂ ಸನಾತನ ಧರ್ಮವು ವಿಶ್ವದ ಅತ್ಯಂತ ಹಳೆಯ ಧಾರ್ಮಿಕ ನಂಬಿಕೆಯಾಗಿದೆ. ಹಿಂದೂ ಜೀವನ ವಿಧಾನವನ್ನು ಆಚರಿಸಲು ಸ್ವಯಂಪ್ರೇರಣೆಯಿಂದ ಮುಂದೆ ಬರುವ ಇತರ ಧಾರ್ಮಿಕ ನಂಬಿಕೆಗಳ ವ್ಯಕ್ತಿಗಳನ್ನು ನಾವು ಸ್ವಾಗತಿಸುತ್ತೇವೆ. ಹಿಂದೂ ಸನಾತನ ಧರ್ಮವನ್ನು ರಕ್ಷಿಸುವ ಮತ್ತು ಪ್ರಚಾರ ಮಾಡುವ ನಮ್ಮ ಮುಖ್ಯ ಧ್ಯೇಯದ ಭಾಗವಾಗಿ, ತಿರುಮಲದಲ್ಲಿ ಸ್ವಯಂಪ್ರೇರಣೆಯಿಂದ ಧರ್ಮ ಸೇರಲು ಬರುವವರಿಗೆ ಸನಾತನ ಧರ್ಮದಲ್ಲಿ ಕಲಿಸಿದ ಹಿಂದೂ ಆಚರಣೆಗಳು, ಸಂಪ್ರದಾಯಗಳು ಮತ್ತು ಆಚರಣೆಗಳಲ್ಲಿ ತರಬೇತಿ ನೀಡಲಾಗುವುದು. ಇದನ್ನು ತಿರುಮಲದ ಶ್ರೀ ವೆಂಕಟೇಶ್ವರ ಸ್ವಾಮಿಯ ಕಮಲದ ಪಾದದಲ್ಲಿ ಪ್ರಾರಂಭಿಸಲಾಗುವುದು ಎಂದು ಟಿಟಿಡಿ ಅಧ್ಯಕ್ಷ ಭೂಮನ ಕರುಣಾಕರ ರೆಡ್ಡಿ ತಿಳಿಸಿದರು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.